ರಾಜಕುಮಾರನೂ ಇನ್ನೂ ಬಂದಿಲ್ಲವೆ ?' ಉಜ್ಜಯಿನಿಯ ರಾಜ ಪ್ರದ್ಯೋತನ ಮಗನಿಗಾಗಿ ದೂತನು ಬಂದು ಪ್ರಸ್ತಾಪಿಸಿದ್ದಾನೆಂದು ಚೇಟಿ ಹೇಳಿದುದನ್ನು ಕೇಳಿ ವಾಸವದತ್ತೆ 'ಇನ್ನು ನನ್ನ ತಮ್ಮನ ಹೆಂಡತಿಯೇ ಆಗಿಬಿಟ್ಟಳಲ್ಲ' ಎಂದು ಆತ್ಮೀಯ ಭಾವನೆಯಿಂದ ಹಿಗ್ಗುತ್ತಾಳೆ. ಅಷ್ಟರಲ್ಲಿ ತಪೋವನದಂತಹ ಪುಣ್ಯಭೂಮಿಯಲ್ಲಿ ಯಾರಿಗಾದರೂ ಏನಾದರೂ ದಾನಮಾಡಿ ಪುಣ್ಯಭಾಗಿನಿಯಾಗಬೇಕೆಂಬ ಬಯಕೆಯಿಂದ ಪದ್ಮಾವತಿ ಅಲ್ಲಿ 'ಯಾರಿಗೆ ಏನು ಅಪೇಕ್ಷೆ' ಎಂಬುದನ್ನು ವಿಚಾರಿಸಿ ತಿಳಿಯುವಂತೆ ಕಾಂಚುಕೀಯನಿಗೆ ಆಜ್ಞಾಪಿಸುತ್ತಾಳೆ. ಇದನ್ನು ಕೇಳಿದ ಯೌಗಂಧರಾಯಣನೇ ಮುಂದಾಗಿ ಬಂದು — 'ಈ ನನ್ನ ತಂಗಿ ಪ್ರೋಷಿತಭರ್ತೃಕೆ; ಇವಳನ್ನು ಧರ್ಮಬುದ್ಧಿಯ ರಾಜಕುಮಾರಿ ತನ್ನಲ್ಲಿ ನ್ಯಾಸವಾಗಿಟ್ಟುಕೊಂಡಿರಬೇಕೆಂಬುದು ನನ್ನ ಅಪೇಕ್ಷೆ' ಎನ್ನುತ್ತಾನೆ. 'ಏನನ್ನಾದರೂ ಕೊಟ್ಟುಬಿಡಬಹುದು. ನ್ಯಾಸರಕ್ಷೆ ತುಂಬ ಕಷ್ಟ' ಎಂದು ಕಾಂಚುಕೀಯ ಹಿಂದೆಗೆಯುತ್ತಾನೆ. ಆದರೆ ಪದ್ಮಾವತಿ 'ಮಾತುಕೊಟ್ಟು ಹಿಂದೆಗೆಯುವುದೇ ? ಒಪ್ಪಿಕೊ' ಎನ್ನುತ್ತಾಳೆ. 'ಸತ್ಯವಾದಿನಿ ಭರ್ತೃದಾರಿಕೆ ನೂರು ಕಾಲ ಬದುಕಿರಲಿ' ಎಂದು ಚೇಟಿಯೂ ತಾಪಸಿಯೂ ಪದ್ಮಾವತಿಯನ್ನು ಹರಸುತ್ತಾರೆ. ಪದ್ಮಾವತಿಯ ಧರ್ಮಶ್ರದ್ಧೆ, ಸತ್ಯಪರತೆಗಳನ್ನು ಕಂಡು ವಾಸವದತ್ತೆಯ ಮನಸ್ಸಿನ ಮೇಲಾದ ಪರಿಣಾಮವನ್ನು ಭಾಸ ಇಲ್ಲಿ ಸೂಚಿಸದೆ ನಮ್ಮ ಊಹೆಗೇ ಬಿಟ್ಟುಬಿಟ್ಟಿದ್ದಾನೆ. ಯೌಗಂಧರಾಯಣನು ವಾಸವದತ್ತೆಯನ್ನು ಕುರಿತು 'ವತ್ಸೆ, ರಾಜಕುಮಾರಿಯ ಬಳಿಗೆ ಹೋಗು' ಎನ್ನುತ್ತಾನೆ. ವಾಸವದತ್ತೆಯ ಮನಸ್ಸಿನೊಳಗಿನ ದುಗುಡ ಅವಳೊಬ್ಬಳಿಗೇ ಗೊತ್ತು. ಅವಳ ಮನದೊಳಕ್ಕೆ ಪ್ರವೇಶಿಸಿ ಅದನ್ನು ಕಂಡವನೋ ಎಂಬಂತೆ ಭಾಸ ಅವಳ ಬಾಯಲ್ಲಿ 'ಬೇರೇನು ಗತಿ ? ಮಂದಭಾಗಿನಿ ಹೋಗುತ್ತೇನೆ' ಎಂದು ಆತ್ಮಗತವಾಗಿ ನುಡಿಸುತ್ತಾನೆ. ಪಾಪ ! ಪದ್ಮಾವತಿಗೇನು ಗೊತ್ತು ವಾಸವದತ್ತೆಯ ವಿಚಾರ. ಅವಳಿನ್ನೂ ಮುಗ್ಧೆ; ಕೃತ್ರಿಮವರಿಯದ ಧರ್ಮಬುದ್ಧಿಯ ಎಳೆ ಮನಸ್ಸಿನ ಹುಡುಗಿ. ಆದರೂ ತನ್ನಲ್ಲಿ ನ್ಯಾಸವಾಗಿ ಬಂದ ವಾಸವದತ್ತೆಯನ್ನು 'ಈಗ ನನಗಿವಳು ಆತ್ಮೀಯೆ' ಎಂದು ಸ್ವಾಗತಿಸುತ್ತಾಳೆ. ತಾಪಸಿಯ ದೃಷ್ಟಿ ಈಗ ವಾಸವದತ್ತೆಯ ಕಡೆ ತಿರುಗುತ್ತದೆ. ಅವಳ ಉಜ್ಜ್ವಲ ಘನತೆವೆತ್ತ ಆಕೃತಿಯನ್ನು ಕಂಡು 'ಇವಳೂ ರಾಜದಾರಿಕೆಯಿರಬೇಕೆನ್ನಿಸುತ್ತದೆ' ಎನ್ನುತ್ತಾಳೆ. ಚೇಟಿಯೂ 'ಅಹಮಪ್ಯನುಭೂತಸುಖೇತಿ ತರ್ಕಯಾಮಿ' ಎಂದು ಅದನ್ನೇ ಪುಷ್ಟೀಕರಿಸುತ್ತಾಳೆ. ಇಲ್ಲೆಲ್ಲಾ ನಾವು ಕಾಣಬೇಕಾದುದು ಭಾಸನ ಅಸಾಧಾರಣ ಸಾಮರ್ಥ್ಯ; ಮತ್ತೊಬ್ಬರ ಮನಸ್ಸಿನಲ್ಲಿ ಆಗುವುದನ್ನು ಹೊಳೆಯುವುದನ್ನು

ತಾನು ಕಣ್ಣಾರ ಕಂಡಂತೆ ಒಂದೆರಡೇ ಮಾತುಗಳಲ್ಲಿ, ಅದೂ ಅವರವರ ಸಂಭಾಷಣೆಯಲ್ಲಿ, ಸಹಜವಾದ ರೀತಿಯಲ್ಲಿ, ಸೂಚ್ಯವಾಗಿ ಚಿತ್ರಿಸುವ ಕೌಶಲ.

ಇಲ್ಲಿಗೆ ಯೌಗಂಧರಾಯಣ ತನ್ನ ಧ್ಯೇಯ ಸಾಧನೆಯ ದಿಕ್ಕಿನಲ್ಲಿ ಅರ್ಧ ಮಾರ್ಗ ಕ್ರಮಿಸಿದಂತಾಯಿತು. ದೈವಜ್ಞರು ನುಡಿದಿದ್ದ ಭವಿಷ್ಯವನ್ನು ನಂಬಿ, ಪದ್ಮಾವತಿಯು ವತ್ಸರಾಜನನ್ನು ಮುಂದೆ ಮದುವೆಯಾದ ಮೇಲೆ ರಾಜ್ಯವು ಪುನಃ ಜಯಿಸಲ್ಪಟ್ಟ ಬಳಿಕ ವತ್ಸರಾಜನಿಗೆ ವಾಸವದತ್ತೆಯನ್ನು ತಿರುಗಿ ಒಪ್ಪಿಸುವಾಗ ಅವಳ ಶುದ್ಧಚಾರಿತ್ರದ ವಿಷಯದಲ್ಲಿ ಪದ್ಮಾವತಿಯೇ ಸಾಕ್ಷಿಯಾಗಿರುವುದು ಒಳ್ಳೆಯದೆಂದು ಭಾವಿಸಿ, ತಾನಾಗಿ ದೊರೆತ ಅವಕಾಶವನ್ನು ಯೌಗಂಧರಾಯಣ ಹೀಗೆ ಉಪಯೋಗಿಸಿಕೊಂಡು, ತನ್ನ ಪ್ರಯತ್ನದಲ್ಲಿ ದೈವ ಅಷ್ಟು ದೂರ ಸಹಕರಿಸಿದುದಕ್ಕಾಗಿ ಸಮಾಧಾನಪಟ್ಟುಕೊಳ್ಳುತ್ತಾನೆ.

ನಾಟಕದಲ್ಲಿ ಇದೊಂದು ಘಟ್ಟವೇನೋ ನಿಜ. ಆದರೆ ಭಾಸ ಈ ಅಂಕವನ್ನು ಇಲ್ಲಿಗೇ ಮುಗಿಸುವುದಿಲ್ಲ. ಆತನಿಗೆ ಮುಂದಿನ ದೃಷ್ಟಿ. ಇದೇ ಸಂದರ್ಭದಲ್ಲೇ ಪದ್ಮಾವತಿಗೂ ವತ್ಸರಾಜನ ಮೇಲೆ ಪ್ರೇಮ ಅಂಕುರಿಸುವಂತಹ ಸನ್ನಿವೇಶವನ್ನು ಕಲ್ಪಿಸಿಬಿಡಬೇಕೆಂಬುದು ಆತನ ಧ್ಯೇಯ. ಆದ್ದರಿಂದ ಒಬ್ಬ ಬ್ರಹ್ಮಚಾರಿಯು ಅನಿರೀಕ್ಷಿತವಾಗಿ ಅದೇ ತಪೋವನಕ್ಕೆ ಅದೇ ವೇಳೆಗೆ ಸರಿಯಾಗಿ ಬರುವಂತೆ ಮಾಡುತ್ತಾನೆ. ಒಳ್ಳೆಯ ಮಧ್ಯಾಹ್ನ ಸಮಯ. ತಪೋವನವೆಂದು ಬ್ರಹ್ಮಚಾರಿಯು ಬಂದರೆ ಅಲ್ಲಿ ಆವನು ನೋಡುವುದು ನಗರವಾಸಿಗಳನ್ನು; ಅದರಲ್ಲೂ ರಾಜಪರಿವಾರವನ್ನು ! ಆದರೆ ತಪಸ್ವಿಜನರೂ ಇದ್ದಾರೆ ಅಂದುಕೊಳ್ಳುವಷ್ಟರಲ್ಲಿ ಸ್ತ್ರೀಯರು ಗೋಚರವಾಗುತ್ತಾರೆ. ಆಗಂತುಕನ ಮನಸ್ಸಿನೊಳಗಿನ ವಿಚಾರಧಾರೆಯನ್ನು ಅರಿತು ಕಾಂಚುಕೀಯ ಅವನನ್ನು ಸ್ವಾಗತಿಸುತ್ತಾ 'ಸರ್ವಜನಸಾಧಾರಣಮಾಶ್ರಮಪದಂ ನಾಮ' ಎಂದು ಹೇಳುತ್ತಾನೆ. ಸಾಮಾನ್ಯ ಜನರೆದುರಿಗೆ ಎಂದೂ ಬಂದು ಅಭ್ಯಾಸವಿಲ್ಲದ ವಾಸವದತ್ತೆ ಮೊದಲು ಏನು ಹೇಳಲೂ ಮಾಡಲೂ ತೋಚದೆ 'ಹಂ!' ಎಂದು ಉದ್ಗರಿಸುತ್ತಾಳೆ. ಇನ್ನೂ ಅವಿವಾಹಿತ ಬಾಲೆಯಾಗಿದ್ದರೂ ಪದ್ಮಾವತಿಯ ಕರ್ತವ್ಯನಿಷ್ಠೆ ಇಲ್ಲಿ ಗಮನಾರ್ಹ. ವಾಸವದತ್ತೆಯ ಸ್ಥಿತಿಯನ್ನು ಮನಗಂಡು ಹೇಳುತ್ತಾಳೆ— 'ಆರ್ಯೆ ಪರಪುರುಷರ ದರ್ಶನವನ್ನು ಪರಿಹರಿಸುತ್ತಾಳೆ. ನನ್ನಲ್ಲಿಟ್ಟ ನ್ಯಾಸವನ್ನು ನಾನು ಸರಿಯಾಗಿ ಪರಿಪಾಲಿಸಬೇಕು' ಎಂದು.

ಆಗಂತುಕ ಬ್ರಹ್ಮಚಾರಿಯನ್ನು ಯೌಗಂಧರಾಯಣ ವಿಚಾರಿಸುತ್ತಾನೆ —'ನೀನು ಎಲ್ಲಿಂದ ಬರುತ್ತಿದ್ದೀ ? ಎಲ್ಲಿಗೆ ಹೋಗಬೇಕು ? ನಿನ್ನ ಊರು ಯಾವುದು ?'

'ರಾಜಗೃಹದವನು; ಶ್ರುತಿಗಳಲ್ಲಿ ವಿಶೇಷ ಜ್ಞಾನಕ್ಕೆ ಪ್ರಸಿದ್ಧವಾದ ಲಾವಾಣಕದಲ್ಲಿ ವಾಸವಾಗಿದ್ದೆ'. ಈ ಸಂಭಾಷಣೆಯಲ್ಲಿ ವಾಸವದತ್ತೆಗೆ ಯಾವ ಪಾತ್ರವೂ ಇಲ್ಲದಿದ್ದರೂ, ಸಂಭಾಷಣೆ ಕೇಳಿ ಅವಳ ಮನಸ್ಸಿನಮೇಲಾಗುವ ಪರಿಣಾಮುಗಳನ್ನು ಮಧ್ಯೆ ಮಧ್ಯೆ ಭಾಸ ಅವಳ ಆತ್ಮಗತ ವಾಕ್ಯಗಳ ಮೂಲಕ ಸೂಚಿಸುತ್ತಾನೆ. 'ಲಾವಾಣಕದ ಹೆಸರು ಕೇಳಿ ನನ್ನ ಸಂತಾಪ ಪುನಃ ಹೊಸದಾದಂತಿದೆ' ಎಂದುಕೊಳ್ಳುತ್ತಾಳೆ ವಾಸವದತ್ತೆ. ಪಾಪ! ಯೌಗಂಧರಾಯಣನ ಮಾತು ಕೇಳಿ, ಬೇಟೆಯಲ್ಲಿ ಮಗ್ನನಾಗಿದ್ದ ಪತ್ನೀಪ್ರಾಣನಾದ ತನ್ನ ಗಂಡನನ್ನು ಅವನ ಶ್ರೇಯಸ್ಸಾಧನೆಗೆಂದು ಬಿಟ್ಟುಬಿಟ್ಟು ಬಂದವಳು. ತನ್ನ ಅಗಲಿಕೆಯಿಂದ ಅವನು ಎಷ್ಟು ದುಃಖಿಸುತ್ತಾನೋ ಏನಾಗಿಬಿಡುತ್ತಾನೋ ಎಂಬ ಕಳವಳದಲ್ಲಿ ಮೌನವಾಗಿ ಎಲ್ಲವನ್ನೂ ಸಹಿಸಲು ಸಿದ್ಧಳಾಗಿರುವವಳು. ಅಂತಹವಳು ಲಾವಣಕದ ಹೆಸರು ಕೇಳಿ ಸಂತಪಿಸುವುದು ಸಹಜವೇ! ಮಾತು ಮುಂದೆ ಸಾಗುತ್ತದೆ.

'ಅಲ್ಲಿ ಅತಿ ದಾರುಣವಾದ ದುರ್ಘಟನೆಯೊಂದು ಸಂಭವಿಸಿತು'
'ಅಂದರೆ?'
'ಉದಯನನೆಂಬೊಬ್ಬ ರಾಜ ಅಲ್ಲಿದ್ದ'
'ಕೇಳಿಬಲ್ಲೆ. ಏನು ಅವನ ವಿಷಯ?'
'ಅವನಿಗೆ ಅವಂತಿರಾಜಪುತ್ರಿ ವಾಸವದತ್ತೆಯೆಂಬ ಪತ್ನಿಯಲ್ಲಿ ತುಂಬ ಪ್ರೇಮ.'
'ಇರಬೇಕಾದ್ದೇ. ಆಮೇಲೆ?'

'ಅವನೊಂದು ದಿನ ಬೇಟೆಗೆ ಹೋಗಿದ್ದಾಗ ಊರಿಗೆ ಬೆಂಕಿಬಿದ್ದು ಅವಳು ಸುಟ್ಟು ಹೋದಳು.' ಈ ಸಂಭಾಷಣೆ ಮುಂದೆ ಸಾಗುವ ರೀತಿ ನೋಡಿ. ಎಲ್ಲಕ್ಕೂ ಕಾರಣನಾದ ಯೌಗಂಧರಾಯಣ ಏನೂ ತಿಳಿಯದವನಂತೆ, ನಿರ್ಲಿಪ್ತನಾಗಿ, ತನ್ನ ಮನಸ್ಸಿನೊಳಗಿನ ಭಾವನೆಯೊಂದನ್ನೂ ಸ್ವಲ್ಪವೂ ಹೊರಗೆಡಹದೆ ಸಹಜವಾಗಿ ವೃತ್ತಾಂತವನ್ನು ತಿಳಿಯುವುದರಲ್ಲಿ ಆಸಕ್ತನಾದ ಸಾಧಾರಣ ದಾರಿಹೋಕನೊಬ್ಬನಂತೆ ವ್ಯವಹರಿಸುವುದೂ, ವಾಸವದತ್ತೆಯು ತಾನು ಲಾವಾಣಕ ಬಿಟ್ಟು ಬಂದ ಮೇಲೇನಾಯಿತೆಂಬುದನ್ನು ತಿಳಿದುಕೊಳ್ಳಲು ವಿಶೇಷ ಕುತೂಹಲವಿದ್ದರೂ ಅದನ್ನು ಹೊರತೋರದೆ ಮೌನವಾಗಿದ್ದುಕೊಂಡು ತಾನು ಸತ್ತು ಹೋದಂತೆ ಇತರರು ನಂಬಿರುವುದನ್ನು ಕೇಳಿ ಬದುಕಿಯೇ ಇರುವ ತನ್ನನ್ನು ಮಂದಭಾಗಿನಿಯೆಂದು ಹಳಿದುಕೊಳ್ಳುತ್ತಾ ಒಳಗೊಳಗೇ ಸಂತಪಿಸುವುದೂ, ಈ ಲಾವಾಣಕ ವೃತ್ತಾಂತ ಶ್ರವಣದಿಂದ ಸ್ವಲ್ಪಸ್ವಲ್ಪವಾಗಿ ತಾನಾಗಿ ಪದ್ಮಾವತಿಗೆ ವತ್ಸರಾಜನಮೇಲೆ ಮೊದಲು ಅನುಕಂಪ, ಬಳಿಕ ಅಭಿಮಾನ, ನಂತರ ಪ್ರೇಮ ಅಂಕುರಿತವಾಗುವುದೂ — ಎಲ್ಲವೂ ಎಷ್ಟು ಸ್ವಾಭಾವಿಕವಾಗಿ ಒಂದರೊಡ

ನೊಂದು ಹೊಂದಿಕೊಂಡು ಸಂಭಾಷಣೆಯಲ್ಲಿ ಮೂಡಿಬಂದಿದೆಯೆಂಬುದು ಎಂತಹವರಿಗೇ ಆಗಲಿ ಮನವರಿಕೆಯಾಗದಿರದು. ಬ್ರಹ್ಮಚಾರಿ ಮುಂದು ವರೆದು ಹೇಳುತ್ತಾನೆ—

'ಆಗ ವಾಸವದತ್ತೆಯನ್ನುಳಿಸುವುದಕ್ಕಾಗಿ ಯೌಗಂಧರಾಯಣನೆಂಬ ಮಂತ್ರಿಯೂ ಅದೇ ಬೆಂಕಿಯೊಳಕ್ಕೆ ಪ್ರವೇಶಿಸಿದ'.

'ನಿಜವಾಗಿಯೂ! ಆಮೇಲೆ?' ಯೌಗಂಧರಾಯಣನ ಈ ಅಲಿಪ್ತರೀತಿಯ ಮಾತನ್ನು ಕೇಳಿದ ವಾಸವದತ್ತೆಯ ಮನಸ್ಸಿನ ಮೇಲಾಗಿರಬಹುದಾದ ಪರಿಣಾಮವನ್ನು ಪ್ರೇಕ್ಷಕ-ವಾಚಕರ ಊಹೆಗೇ ಭಾಸ ಬಿಟ್ಟುಬಿಟ್ಟಿದ್ದಾನೆ.

'ಆಮೇಲೆ, ರಾಜ ಹಿಂದಿರುಗಿ ಬಂದು ವೃತ್ತಾಂತವನ್ನು ಕೇಳಿ ಅವರಿಬ್ಬರ ವಿಯೋಗದಿಂದ ಸಂತಪ್ತನಾಗಿ ಅದೇ ಅಗ್ನಿಯೊಳಕ್ಕೆ ಹಾರಿ ಪ್ರಾಣ ಕಳೆದುಕೊಳ್ಳುವುದ ರಲ್ಲಿರಲು ಮಂತ್ರಿಗಳು ಬಹಳ ಪ್ರಯಾಸಪಟ್ಟು ಅದನ್ನು ತಡೆದರು.' ಈಗ ವಾಸವ ದತ್ತೆಗೆ ದುಃಖದಲ್ಲೂ ಸ್ವಲ್ಪ ಸಮಾಧಾನ, ತನ್ನ ಬಗೆಗೆ ತನ್ನ ಪತಿಯ ಸಾನು ಕ್ರೋಶತೆ ತನ್ನ ನಿರೀಕ್ಷೆಯಂತೆಯೇ ಇರುವುದನ್ನು ಕೇಳಿ.

'ಬಳಿಕ, ಅವಳು ಧರಿಸಿದ್ದ ದಗ್ಧಶೇಷಗಳಾಗಿದ್ದ ಆಭರಣಗಳನ್ನು ಅಪ್ಪಿಕೊಂಡು ರಾಜ ಮೂರ್ಛಿತನಾದ.'

ಇದನ್ನು ಕೇಳಿ ಎಲ್ಲರೂ 'ಹಾ!' ಎಂದು ದುಃಖಿತರಾಗುತ್ತಾರೆ. ವಾಸವ ದತ್ತೆಗೋ ದುಃಖ ಒಂದು ಕಡೆ. ಪರೋಕ್ಷದಲ್ಲೂ ತನ್ನ ಪತಿಗೆ ತನ್ನ ಮೇಲಿದ್ದ ಪ್ರೇಮದ ನಿದರ್ಶನವನ್ನು ಕೇಳಿ ಹಿಗ್ಗು ಒಂದು ಕಡೆ. ತಮ್ಮ ಈ ಸಂತಾಪಕ್ಕೆ ಕಾರಣನಾದ ಯೌಗಂಧರಾಯಣನ ಸ್ವಾಮಿಭಕ್ತಿ, ಸ್ವಾಮಿಯ ಶ್ರೇಯಸ್ಸಿಗಾಗಿ ಅವನು ಪಡುತ್ತಿರುವ ನಿಃಸ್ವಾರ್ಥಶ್ರಮಗಳನ್ನರಿತಿದ್ದ ಅವಳಿಗೆ ಅವನನ್ನು ಅನ್ನುವುದಕ್ಕೂ ಇಲ್ಲ, ಬಿಡುವುದಕ್ಕೂ ಇಲ್ಲ, ಎಂಬಂತಹ ಇಕ್ಕಟ್ಟು. 'ಸಕಾಮ ಇದಾನೀಂ ಆರ್ಯಯೌಗಂಧರಾಯಣೋ ಭವತು' ಎಂದು ಅರ್ಥಗರ್ಭಿತವಾಗಿ ತನ್ನೊಳಗೇ ಅಂದುಕೊಂಡು, ದುಃಖವನ್ನು ನುಂಗಿಕೊಳ್ಳಲಾರದೆ ಅತ್ತುಬಿಡು ತ್ತಾಳೆ. ಇದನ್ನು ಗಮನಿಸಿದ ಚೇಟಿ ಪದ್ಮಾವತಿಗೆ ಹೇಳುತ್ತಾಳೆ—'ರೋದಿತಿ ಖಲ್ವಿಯಮಾರ್ಯಾ' ಎಂದು. ಪದ್ಮಾವತಿಯೂ ವತ್ಸರಾಜನ ಕರುಣಪೂರ್ಣ ಕಥೆ ಕೇಳಿ ಒಳಗೇ ಅಳುತ್ತಿದ್ದಿರಬೇಕೋ ಏನೋ, ವಾಸವದತ್ತೆ ಅತ್ತಳೆಂಬುದರಲ್ಲಿ ಅವಳಿಗೆ ಆಶ್ಚರ್ಯವೇ ಇಲ್ಲ. ವಾಸವದತ್ತೆ ಅತ್ತುದರಿಂದ ಅವಳ ಬಗ್ಗೆ ಯಾರು ಯಾರಿಗೆ ಸಂದೇಹ ಬಂದುಬಿಡುತ್ತೋ ಎಂದು ಯೌಗಂಧರಾಯಣನಿಗೆ ಮಾತ್ರ ಕಳವಳ. ಆದರೆ, ಅಷ್ಟಕ್ಕೆ ಸರಿಯಾಗಿ ಪದ್ಮಾವತಿಯೇ 'ಅವಳು ಕೋಮಲ ಸ್ವಭಾವದವಳಿರಬೇಕು' ಎಂದು ದು ಅವನಿಗೇ ಮಾರ್ಗದರ್ಶನ ಮಾಡಿ

ಕೊಟ್ಟಂತಾಗಿ, 'ಹೌದು, ಹೌದು, ನನ್ನ ತಂಗಿ ಸ್ವಭಾವದಿಂದಲೇ ಕೋಮಲ ಹೃದಯೆ' ಎನ್ನುತ್ತಾನೆ. ಬ್ರಹ್ಮಚಾರಿ ಕಥೆ ಮುಂದುವರಿಸುತ್ತಾನೆ.

'ಆಮೇಲೆ ಮೆಲ್ಲಮೆಲ್ಲನೆ ಪ್ರಜ್ಞೆ ಬಂತು'

ಈ ಮಾತು ಕೇಳಿ ಪದ್ಮಾವತಿಗೆ ಆದ ಸಮಾಧಾನ ಅಷ್ಟಿಷ್ಟಲ್ಲ. ಅವಳೇ ಹೇಳುತ್ತಾಳೆ.—'ಸದ್ಯ ಬದುಕಿದನಲ್ಲ! ಮೂರ್ಛೆ ಹೋದನೆಂದು ಕೇಳಿ ನನ್ನ ಹೃದಯ ಶೂನ್ಯಪ್ರಾಯವಾಗಿಬಿಟ್ಟಿತ್ತು.' ಕಥೆ ಮುಂದುವರಿಯುತ್ತದೆ—'ಆಮೇಲೆ ರಾಜ ದುಃಖದಿಂದ ಬರಿಯ ನೆಲದಮೇಲೆ ಹೊರಳಾಡಿ, ತಟ್ಟನೆದ್ದು, ಹಾ ಅವಂತಿರಾಜ ಪುತ್ರಿ! ಹಾ ಪ್ರಿಯೆ! ಹಾ ಪ್ರಿಯಶಿಷ್ಯೆ! ಎಂದು ಮುಂತಾಗಿ ಏನೇನೋ ಬಹಳ ಪ್ರಲಾಪಿಸಿದನು. ಹೆಚ್ಚೇಕೆ! ಈಗ ಅವನಷ್ಟು ಪ್ರೀತಿಸುವ ಚಕ್ರವಾಕಗಳೂ ಇರಲಾರವು. ಯಾವಳನ್ನು ಪತಿ ಇಷ್ಟು ಪ್ರೀತಿಸಿದ್ದಾನೋ ಆ ಸ್ತ್ರೀಯೇ ಧನ್ಯೆ. ಅವಳು ದಗ್ಧಳಾಗಿ ಹೋಗಿದ್ದರೂ ಭರ್ತೃಸ್ನೇಹದ ಕಾರಣದಿಂದ ಅದಗ್ಧಳೇ ಸರಿ.' ಇಂತಹ ಸ್ಥಿತಿಯಲ್ಲಿ ಮಂತ್ರಿ ರುಮಣ್ವಂತನು ಅನ್ನನೀರು ಬಿಟ್ಟು ರಾಜನ ಬಳಿಯೇ ಇದ್ದುಕೊಂಡು ಅವನನ್ನು ನೋಡಿಕೊಳ್ಳುತ್ತಿದ್ದಾನೆಂದೂ ಬ್ರಹ್ಮಚಾರಿ ತಿಳಿಸುತ್ತಾನೆ. ಅದನ್ನು ಕೇಳಿದಮೇಲೆಯೇ ವಾಸವದತ್ತೆಗೂ ಯೌಗಂಧರಾಯಣನಿಗೂ ಸಮಾಧಾನ. ಅವನು ಕೇಳುತ್ತಾನೆ—

'ಈಗ ರಾಜನು ಪೂರ್ವಸ್ಥಿತಿಗೆ ಬಂದಿದ್ದಾನೆಯೆ?'

'ನನಗದು ತಿಳಿಯದು. ಇಲ್ಲಿ ಅವಳೊಡನೆ ನಗುತ್ತಿದ್ದೆ; ಇಲ್ಲಿ ಮಾತಾಡುತ್ತಿದ್ದೆ; ಇಲ್ಲಿ ಅವಳೊಡನೆ ಕುಳಿತಿದ್ದೆ; ಇಲ್ಲಿ ಕೋಪಗೊಂಡಿದ್ದ; ಇಲ್ಲಿ ಅವಳೊಡನೆ ಮಲಗಿದ್ದೆ—ಎಂದು ಅವನು ವಿಲಪಿಸುತ್ತಿರಲು ಮಂತ್ರಿಗಳು ಬಹಳ ಯತ್ನಿಸಿ ಆ ಗ್ರಾಮದಿಂದ ಅವನನ್ನು ಕರೆದುಕೊಂಡು ಹೊರಟುಹೋದರು. ರಾಜನು ಹೋದಮೇಲೆ ಆ ಗ್ರಾಮವೂ ನಕ್ಷತ್ರ ಚಂದ್ರ ಒಂದೂ ಇಲ್ಲದ ಆಕಾಶದಂತೆ ಅರಮಣೀಯವಾಗಿಬಿಟ್ಟಿತು. ನಾನೂ ಬಂದುಬಿಟ್ಟೆ.'

ಇಲ್ಲಿಗೆ ಬ್ರಹ್ಮಚಾರಿಯು ಹೇಳಬೇಕಾಗಿದ್ದ ಕಥೆ ಮುಗಿಯಿತು. ಬ್ರಹ್ಮಚಾರಿಯ ಪಾತ್ರದಿಂದ ಭಾಸನಿಗೂ ಇನ್ನೇನೂ ಆಗಬೇಕಾಗಿಲ್ಲ. ಅವನನ್ನು ಅವನ ದಾರಿಯಲ್ಲಿ ಕಳುಹಿಸಿಬಿಡುತ್ತಾನೆ. ಆದರೆ ಈ ಕಥೆ ಕೇಳುತ್ತಿದ್ದವರ ಮಾತು ಆರಂಭವಾಗುತ್ತದೆ. ನಾಟಕದ ಕಥಾವಸ್ತು ಸಹಜವಾಗಿ ಮುಂದುವರಿಯುತ್ತದೆ. ತಾಪಸಿ ಹೇಳುತ್ತಾಳೆ—'ಆಗಂತುಕನೂ ಹೀಗೆ ಹೊಗಳಬೇಕಾದರೆ ಆ ರಾಜ ನಿಜವಾಗಿಯೂ ಉತ್ತಮಗುಣವುಳ್ಳವನಾಗಿರಬೇಕು.' ಚೇಟಿ ಪದ್ಮಾವತಿಯನ್ನು ಕೇಳುತ್ತಾಳೆ—'ಬೇರಾವ (ಪುಣ್ಯವತಿ) ಸ್ತ್ರೀ ಅವನ ಕೈಹಿಡಿಯುವಳೋ?' ಪದ್ಮಾವತಿಯು ವತ್ಸರಾಜನ ಗುಣಗಳನ್ನು ಕೇಳಿ ಬೆರಗಾಗಿ ಅವನ ಕೈ ಹಿಡಿಯುವವಳೇ ಪುಣ್ಯವತಿ ಎಂದು ಯೋಚಿಸುತ್ತಿದ್ದಾಗ, ಇವರಿಬ್ಬರ ಮಾತು ಅವಳಿಗೆ

ಕೇಳಿಬಂದು 'ನನ್ನ ಮನಸ್ಸಿನಲ್ಲಿರುವಂತೆಯೇ ಇವರೂ ಯೋಚಿಸುತ್ತಾರಲ್ಲ!' ಅಂದು ಕೊಳ್ಳುತ್ತಾಳೆ. ಇಷ್ಟಲ್ಲದೆ 'ನಾನೇ ಅವನ ಕೈ ಹಿಡಿಯುವಂತಾದರೆ?'— ಎಂದೂ ಅವಳು ಭಾವಿಸಿದ್ದರೆ, ಅದರಲ್ಲಿ ಅಸಹಜತೆಯೇನೂ ಇಲ್ಲವೆಂಬುದನ್ನು ನಮ್ಮ ಊಹೆಗೇ ಭಾಸ ಬಿಟ್ಟುಬಿಡುತ್ತಾನೆ. ಇದೇ ಅವನ ಕುಶಲತೆ. ನಮ್ಮನ್ನೂ ತನ್ನೊಡನೆಯೇ ನಡಸಿಕೊಂಡು ಹೋಗುವುದೇ ಅವನಲ್ಲಿರುವ ವಿಶಿಷ್ಟಗುಣ.

ಇಷ್ಟುಹೊತ್ತಿಗೆ ಸಾಯಂಕಾಲವಾಗುತ್ತ ಬರುತ್ತದೆ. ಎಲ್ಲರ ಅನುಮತಿ ಪಡೆದು ಯೌಗಂಧರಾಯಣ ಹೊರಟುಹೋಗುತ್ತಾನೆ. ಉಳಿದವರೂ ತಮ್ಮ ಬಿಡಾರಕ್ಕೆ ತೆರಳುತ್ತಾರೆ. ಇಲ್ಲಿಗೆ ಮೊದಲನೆಯ ಅಂಕ ಮುಗಿಯುತ್ತದೆ.

ಈ ಅಂಕದ ಕಥೆಯ ವಸ್ತುರಚನೆ, ಸಂವಿಧಾನಕೌಶಲ, ಕಥೆಯನ್ನು ಮುಂದುವರಿಸಿರುವ ರೀತಿ, ಬಾಹ್ಯ ಪ್ರಕೃತಿಯ ವರ್ಣನೆ, ಮಾನವರ ಹೃದಯಾಂತರಾಳದೊಳಗಿನ ಭಾವನಾತರಂಗಗಳ ಸ್ಪಷ್ಟ ಚಿತ್ರಣ,-ಒಂದೊಂದೇ ಸಾಕು, ನಾಟಕ ರಚನೆಯಲ್ಲಿ ಭಾಸನಿಗಿರುವ ಅಸಾಧಾರಣ ಸಾಮರ್ಥ್ಯವನ್ನು ನಿದರ್ಶಿಸಲು.

* * *

ಭಾಸನು ಸ್ತ್ರೀಪಾತ್ರಗಳೇ ಇಲ್ಲದ, ಬರೀ ಪುರುಷಪಾತ್ರಗಳುಳ್ಳ ಕರ್ಣಭಾರ, ದೂತವಾಕ್ಯ, ಪಂಚರಾತ್ರ ನಾಟಕಗಳನ್ನು ರಚಿಸಿ ಸಂಸ್ಕೃತ ನಾಟಕ ಸಾಹಿತ್ಯದಲ್ಲಿ ಹೊಸದೊಂದು ಸಂಪ್ರದಾಯ ಪ್ರಾರಂಭಿಸಿ ಯಶಸ್ವಿಯಾದವನು. ಈಗ ಪುರಷಪಾತ್ರಗಳೇ ಇಲ್ಲದ ಬರೀ ಸ್ತ್ರೀಪಾತ್ರಗಳಿರುವ ನಾಟಕ ಹೇಗಿರುತ್ತದೆಂಬುದರ ದಿಗ್ದರ್ಶನಮಾಡಿಕೊಡುವುದಕ್ಕೋ ಎಂಬಂತೆ ಅವನು ಈ ಸ್ವಪ್ನವಾಸವದತ್ತದ ಎರಡನೆಯ ಮತ್ತು ಮೂರನೆಯ ಅಂಕಗಳನ್ನು ರಚಿಸಿ, 'ಇದೂ ಚೆನ್ನಾಗಿಯೇ ಇದೆಯಲ್ಲ!' ಎಂದು ನಮ್ಮ ಬಾಯಲ್ಲಿ ಅನ್ನಿಸಿದ್ದಾನೆ. ಪುರುಷನಾದ ಭಾಸ ಪುರುಷರ ಹೃದಯಗಳ ಭಾವಾಭಿನಿವೇಶಗಳನ್ನು ಮಾತ್ರವಲ್ಲದೆ ಸ್ತ್ರೀಯರ ಹೃದಯಚಿತ್ರಣವನ್ನೂ ಸಹಜವಾಗಿಯೇ ಮಾಡಬಲ್ಲ ಕುಶಲಿಯೆಂಬುದನ್ನು ಸ್ತ್ರೀಯರು ತಾವು ತಾವೇ ಇದ್ದಾಗ ಹೇಗೆ ನಡೆದುಕೊಳ್ಳುತ್ತಾರೆ, ಆಗ ಅವರ ಯೋಚನಾತರಂಗಗಳು ಹೇಗೆ ಎದ್ದು ಯಾವ ಕಡೆ ಯಾವ ರೀತಿಯಲ್ಲಿ ಸಾಗುತ್ತವೆ ಎಂಬುದನ್ನು ಹೃದಯಂಗಮವಾಗಿ ನೈಜವಾಗಿ ಚಿತ್ರಿಸಿರುವ ಈ ಎರಡೂ ಅಂಕಗಳು ನಿದರ್ಶಿಸುತ್ತವೆ.

ಮಗಧರಾಜಕುಮಾರಿ ಪದ್ಮಾವತಿ ಅರಮನೆಯ ಪ್ರಮದವನದಲ್ಲಿ ಮಾಧವೀಲತಾಮಂಟಪದ ಬಳಿ ವಾಸವದತ್ತೆಯು ಜತೆಯಲ್ಲಿ ಚೆಂಡಾಟ ಆಡುತ್ತಿದ್ದು, ದಣಿದು, 'ಈಗ ಆಟ ಇಷ್ಟಕ್ಕೇ ಸಾಕು' ಎನ್ನುತ್ತಾಳೆ. ಬಹಳಹೊತ್ತು ಚೆಂಡಾಡಿದ್ದುದರಿಂದ ಕೆಂಪಗಾಗಿದ್ದ ಅವಳ ಕೈಯನ್ನು ನೋಡಿ ವಾಸವದತ್ತೆ 'ಬಹಳಹೊತ್ತು ಚೆಂಡಾಡಿ ಅಧಿಕವಾಗಿ ರಾಗ (ಕೆಂಪುಬಣ್ಣ, ಅನುರಾಗ) ಮೂಡಿದ ನಿನ್ನ ಕೈಗಳು ಪರಕೀಯವೆಂಬಂತಾಗಿಬಿಟ್ಟಿವೆ' ಎಂದು ಅರ್ಥಗರ್ಭಿತವಾಗಿ ಹೇಳುತ್ತಾಳೆ. ಆದರೆ ಅವಳ ಶ್ಲೇಷೆ ಅಲ್ಲಿ ಯಾರಿಗೂ ತಿಳಿದಂತೆ ಕಾಣುವುದಿಲ್ಲ. ಚೇಟಿಯು 'ಕನ್ಯಾಭಾವ ರಮಣೀಯವಾದ ಕಾಲ; ಭರ್ತೃದಾರಿಕೆ ಸಂತೋಷವಾಗಿ ಅನುಭವಿಸಲಿ' ಅನ್ನುತ್ತಾಳೆ. ಅವರಿಬ್ಬರೂ ತನ್ನ ಮಾತಿನ ಅರ್ಥ ಗ್ರಹಿಸದಿದ್ದುದರಿಂದ ವಾಸವದತ್ತೆ ಅವರನ್ನು ವ್ಯಂಗ್ಯವಾಗಿ ನೋಡುತ್ತಾಳೆ. ಅದು ಮಾತ್ರ ಪದ್ಮಾವತಿಯ ಗಮನಕ್ಕೆ ಬರುತ್ತದೆ. ಕೇಳುತ್ತಾಳೆ—'ಇದೇನು ಪರಿಹಾಸ್ಯ ಮಾಡುವಂತೆ ನನ್ನನ್ನು ನೋಡುತ್ತೀ?'

'ಇಲ್ಲ. ಈ ದಿನ ನೀನು ತುಂಬ ಚೆನ್ನಾಗಿದ್ದೀಯೆ. ನಿನ್ನ ಸುಂದರ (ವರ-ವರನ) ಮುಖವನ್ನೇ ಎಲ್ಲ ಕಡೆಯಿಂದಲೂ ನೋಡುತ್ತಿದ್ದೇನೆ.' ಈಗ ವಾಸವದತ್ತೆಯ ಶ್ಲೇಷೆ ಪದ್ಮಾವತಿಗೆ ಅರ್ಥವಾಗುತ್ತದೆ.

'ಸುಮ್ಮನೆ ಹೋಗು, ನನ್ನನ್ನು ಹಾಸ್ಯಮಾಡಬೇಡ.'

'ಇದೋ ಸುಮ್ಮನಾದೆ, ಮಹಾಸೇನನ ಸೊಸೆಯಾಗುವವಳೆ!'-ಈ ಮಾತಿನಲ್ಲಿ ವ್ಯಂಗ್ಯವೇ ಇದ್ದರೂ ಅವಳ ಮದುವೆ ವಿಚಾರಕ ಮಾತುಕತೆ ಎತ್ತ ಸಾಗುತ್ತಿದೆ ಎಂದು ತಿಳಿಯುವ ಕುತೂಹಲವೂ ಇದೆ. ಮದುವೆಯಾಗುವವಳ ಆಪ್ತರೇ ಅಲ್ಲಿರುವವರೆಲ್ಲರೂ. ಆದ್ದರಿಂದ ಯಾವ ಆತಂಕವೂ ಇಲ್ಲದೆ ಪದ್ಮಾವತಿಯೇ ಸಹಜವಾಗಿ ಕೇಳುತ್ತಾಳೆ-'ಯಾರು ಈ ಮಹಾಸೇನ?' ಎಂದು. ಅವನ ಮಗಳಾದ ವಾಸವದತ್ತೆಯನ್ನೇ ತಾನು ಪ್ರಶ್ನಿಸುತ್ತಿರುವುದೆಂಬ ಅರಿವಿಲ್ಲದೆ. ವಾಸವದತ್ತೆ ಪುತ್ರೀಸಹಜ ಹೆಮ್ಮೆಯಿಂದ, ಆದರೆ ಅದನ್ನು ಹೊರತೋರದೆ, ಪ್ರದ್ಯೋತ ರಾಜನಿಗೆ 'ಮಹಾಸೇನ' ಎಂಬ ಬಿರುದು ಹೇಗೆ ಬಂತೆಂಬುದನ್ನು ವಿವರಿಸುತ್ತಾಳೆ. ಚೇಟಿಯು ಮಧ್ಯೆ ಬಾಯಿಹಾಕಿ, ಆ ಸಂಬಂಧ ಭರ್ತೃದಾರಿಕೆಗೆ ಇಷ್ಟವಿಲ್ಲವೆಂದೂ, ವತ್ಸರಾಜ ಉದಯನನ್ನು ಅವನ ಗುಣಗಳಿಗಾಗಿ ಮೆಚ್ಚಿದ್ದಾಳೆಂದೂ ತಿಳಿಸುತ್ತಾಳೆ. ವಾಸವದತ್ತೆಗೆ ಒಳಗೊಳಗೇ ಆಘಾತವಾಗುತ್ತದೆ. ಚೇಟಿಯೋ 'ಅವನ ಗುಣಗಳಿಗಾಗಿ' ಎಂದು ಕಾರಣ ತಿಳಿಸಿದ್ದರೂ ವಾಸವದತ್ತೆ ಪುನಃ ಕೇಳುತ್ತಾಳೆ.—

'ಏತಕ್ಕಾಗಿ?'

'ಕೋಮಲಹೃದಯನೆಂದು (ಸಾನುಕ್ರೋಶ ಇತಿ)'

ವಾಸವದತ್ತೆಗೆ ಹಿಂದಿನ ನೆನಪು ಬರುತ್ತದೆ. ತಾನೂ ಈ ಕಾರಣದಿಂದಲೇ ಅವನ ವಿಷಯದಲ್ಲಿ ಉನ್ಮಾದಿತಳಾಗಿದ್ದುದನ್ನು ಸ್ಮರಿಸಿಕೊಳ್ಳುತ್ತಾಳೆ. ಚೇಟಿಯ ಕುತೂಹಲ ವಿಚಿತ್ರ. 'ಅವನು ಸುರೂಪಿಯಲ್ಲದಿದ್ದರೆ?' ಎಂದು ತಾನೇ ಆವಾಹನೆ ಮಾಡಿಕೊಂಡು ಕೇಳುತ್ತಾಳೆ. ವಾಸವದತ್ತೆಗೆ ಪತಿಯ ಮೇಲಣ ಅಭಿಮಾನ ಅಷ್ಟಿಷ್ಟಲ್ಲ. ಅವಳಿಗೆ ಅವನಲ್ಲಿ ದೋಷವೇ ಇಲ್ಲ. ಅವನಂತಹ ಆದರ್ಶಪುರುಷ ಬೇರೊಬ್ಬ ಇಲ್ಲ, ರೂಪದಲ್ಲಿ, ಗುಣದಲ್ಲಿ, ಪ್ರೀತಿಯಲ್ಲಿ, ಎಲ್ಲದರಲ್ಲೂ. ಚೇಟಿಯ ಮಾತು ಕೇಳಿ, ತನ್ನ ಸ್ಥಿತಿಯ ಅರಿವೇ ಇಲ್ಲದೆ, 'ಛೆ, ಛೆ, ಅವನು ತುಂಬ ಸುಂದರ' ಎಂದುಬಿಡುತ್ತಾಳೆ. ಕೂಡಲೇ ಚಾಕಚಕ್ಯತೆಯಿಂದ 'ಉಜ್ಜಯಿನಿಯ ಜನ ಹಾಗೆ ಹೇಳುವುದನ್ನು ಕೇಳಿ ಬಲ್ಲೆ' ಎಂದು ತಿದ್ದಿಕೊಳ್ಳುತ್ತಾಳೆ. ಕಪಟವನ್ನರಿಯದ ಮುಗ್ಧೆ ಪದ್ಮಾವತಿ 'ಅದೂ ನಿಜವೇ. ಸೌಭಾಗ್ಯ ಸರ್ವಜನ ಮನೋಭಿರಾಮವಾದದ್ದೇ ಸರಿ' ಎಂದು ಹೇಳಿ, ಒಳಗೊಳಗೇ ತನಗಾದ ಸಮಾಧಾನವನ್ನು ಹೊರತೋರದೆ ಗಂಭೀರವಾಗಿಬಿಡುತ್ತಾಳೆ. ಅಷ್ಟರಲ್ಲಿ ಧಾತ್ರಿಯು ಬಂದು ರಾಜಕುಮಾರಿಯ ಮದುವೆ ನಿಶ್ಚಯವಾಗಿಬಿಟ್ಟಿತೆಂದು ತಿಳಿಸುತ್ತಾಳೆ. ಈಗ ಎಲ್ಲರಿಗಿಂತ ಹೆಚ್ಚು ಕುತೂಹಲ ವಾಸವದತ್ತೆಗೆ. ಅವಳು ಕೇಳುತ್ತಾಳೆ

'ಯಾರಿಗೆ ಕೊಟ್ಟು?'

'ವತ್ಸರಾಜ ಉದಯನನಿಗೆ'

'ಹಾಗಾದರೆ ಆ ರಾಜ ಕ್ಷೇಮವಾಗಿದ್ದಾನೆಯೆ?' ಎರಡನೆಯ ಮದುವೆಗೆ ಅವನು ಒಪ್ಪುವುದೆಂದರೆ ಅವನಿಗೇನೋ ಆಗಿಬಿಟ್ಟಿದೆ ಎಂಬುದು ವಾಸವದತ್ತೆಯ ಭಯ.

'ಕ್ಷೇಮವಾಗಿಯೇ ಇಲ್ಲಿಗೆ ಬಂದಿದ್ದಾನೆ; ರಾಜಕುಮಾರಿಯನ್ನೂ ಪ್ರತಿಗ್ರಹಿಸಿದ್ದಾನೆ.'

ವಾಸವದತ್ತೆ ಮೈಮರೆತು, ವತ್ಸರಾಜ ಮಾಡಿದ್ದು ತಪ್ಪೆಂಬ ಭಾವನೆಯಿಂದ ಹೇಳಿಬಿಡುತ್ತಾಳೆ. 'ತುಂಬ ಅನ್ಯಾಯ!'

'ಅದೇಕೆ?' ಧಾತ್ರಿ ಸಹಜವಾಗಿಯೇ ಕೇಳುತ್ತಾಳೆ. ಪದ್ಮಾವತಿ, ಚೇಟಿ, ಮತ್ತಿತರರಿಗೂ ಹಾಗೆಯೇ ಕೇಳಬೇಕೆನ್ನಿಸಿರಬೇಕು.

'ಏನೂ ಇಲ್ಲ. ಆಗ ಅಷ್ಟು ಹೊತ್ತು ಗೋಳಾಡಿ ಈಗ ಉದಾಸೀನನಾದನಲ್ಲಾ ಎಂದು' ಬೇಗ ಸಮಾಧಾನ ಹೊಂದುವುದು ಮಹಾಪುರುಷರ ಲಕ್ಷಣ ಎಂದು ಧಾತ್ರಿ ವತ್ಸರಾಜನ 'ಔದಾಸೀನ್ಯ'ಕ್ಕೆ ವಿವರಣೆ ನೀಡಲು, ವಾಸವದತ್ತೆ ಪುನಃ ಕೇಳುತ್ತಾಳೆ—'ಅವನೇ ವರಿಸಿದನೆ?'

'ಇಲ್ಲ, ಇಲ್ಲ. ಬೇರೆ ಕೆಲಸಕ್ಕಾಗಿ ಅವನು ಬಂದಿರಲು, ಅವನ ಮನೆತನ, ವಿದ್ಯೆ, ವಯಸ್ಸು, ರೂಪಗಳನ್ನು ಮೆಚ್ಚಿ ಮಹಾರಾಜನೇ ಒತ್ತಾಯದಿಂದ ಕೊಟ್ಟ.' ಈ ಮಾತು ಕೇಳಿದ ಮೇಲೆಯೇ ವಾಸವದತ್ತೆಗೆ ಸಮಾಧಾನ.

ಅಷ್ಟರಲ್ಲಿ ಚೇಟಿಯೊಬ್ಬಳು ಬಂದು ಅಂದೇ ಸುಮುಹೂರ್ತವೆಂದೂ ಮದುವೆಗೆ ಪೂರ್ವಾಂಗವಾದ ಪ್ರತಿಸರಬಂಧ ನಡೆಯಬೇಕೆಂದೂ ಅವಸರ ಪಡಿಸಿ ಎಲ್ಲರನ್ನೂ ಅರಮನೆಯೊಳಕ್ಕೆ ಕರೆದುಕೊಂಡುಹೋಗುತ್ತಾಳೆ. ವಾಸವ ದತ್ತೆಯ ಆಗಿನ ಮನಃಸ್ಥಿತಿಯನ್ನು ಭಾಸ ಅವಳ ಬಾಯಲ್ಲೇ ಹೇಳಿಸಿದ್ದಾನೆ.–
'ಇವಳು ತ್ವರೆಗೊಳಿಸಿದಂತೆಲ್ಲಾ ನನ್ನ ಹೃದಯವನ್ನು ಅಂಧಕಾರಮಯವಾಗಿಸುತ್ತಿದ್ದಾಳೆ!'

ಹೀಗೆ ಮುಗಿಯುತ್ತದೆ ಹಿತಮಿತವಾದ ಬರೀ ಸ್ತ್ರೀಯರ ಸಂಭಾಷಣೆ ಯಿಂದ ಕೂಡಿದ, ಆಕಾರದಲ್ಲಿ ಕಿರಿದಾದರೂ ರಸಭಾವನಿರೂಪಣೆಯಲ್ಲಿ ಸುಂದರ ವಾದ ಎರಡನೆಯ ಅಂಕ.

* * *

ಎರಡನೆಯ ಅಂಕದಲ್ಲಿ ಪದ್ಮಾವತಿಯ ಆಂತರಿಕ ಸಂತೋಷವನ್ನೂ ವಾಸವದತ್ತೆಯ ದುಗುಡವನ್ನೂ ಒಟ್ಟೊಟ್ಟಿಗೇ ಚಿತ್ರಿಸಿದ ಭಾಸ ಈಗ ಮೂರನೆಯ ಅಂಕದಲ್ಲಿ ವಾಸವದತ್ತೆಯೊಬ್ಬಳ ಪಾಲಿಗೆ ಮಾತ್ರ ಬಂದಿದ್ದ ದುಃಖವನ್ನೂ, ಆ ಸನ್ನಿವೇಶದಲ್ಲಿ ಅವಳು ವ್ಯವಹರಿಸಿದ ರೀತಿಯನ್ನೂ, ಇತರರ ಸಡಗರ ಸಂಭ್ರಮಗಳನ್ನೂ ಸೊಗಸಾಗಿ ಚಿತ್ರಿಸಿದ್ದಾನೆ.

ಮದುವೆಯ ಸಂತೋಷದ ಸಡಗರ ಅರಮನೆಯೊಳಗೆ. ಅದನ್ನೆಲ್ಲ ಬಿಟ್ಟು ವಾಸವದತ್ತೆ ಪ್ರಮದವನಕ್ಕೆ ಬಂದು ಒಬ್ಬಂಟಿಗಳಾಗಿ ಕುಳಿತು ತನ್ನ ಹಣೆಯಬರಹದ ದುಃಖವನ್ನು ತನ್ನಷ್ಟಕ್ಕೆ ತಾನೇ ತೋಡಿಕೊಳ್ಳುತ್ತಾಳೆ.—

'ನನ್ನವನೇ ಆಗಿದ್ದ ಆರ್ಯಪುತ್ರನೂ ಈಗ ಬೇರೊಬ್ಬಳವನಾಗಿಬಿಟ್ಟನಲ್ಲ! ಇಂತಹ ಸಂದರ್ಭದಲ್ಲಿ ಚಕ್ರವಾಕಪಕ್ಷಿ ಕೂಡ ಪ್ರಾಣ ಬಿಟ್ಟುಬಿಡುತ್ತದೆ. ಆದರೆ ಮಂದಭಾಗಿನಿ ಯಾದ ನಾನು ಆ ಕೆಲಸ ಮಾಡಲಾರೆ. ಆರ್ಯಪುತ್ರನನ್ನು ಕಣ್ತುಂಬ ನೋಡಬಹುದಾದ ಅವಕಾಶವಿರುವಾಗ ಜೀವಿಸಿಯೇ ಇರುತ್ತೇನೆ.' ಸ್ವಲ್ಪಹೊತ್ತು ನಿರಾತಂಕವಾಗಿ ತನ್ನ ಸ್ಥಿತಿಯನ್ನು ಮೆಲಕುಹಾಕಲೂ ಅವಳ ದುರ್ವಿಧಿ ಅವಕಾಶಕೊಡ ಲೊಲ್ಲದೋ ಎಂಬಂತೆ ಒಬ್ಬ ಚೇಟಿ ವಾಸವದತ್ತೆಯನ್ನು ಹುಡುಕಿಕೊಂಡು ಅಲ್ಲಿಗೇ ಬರುತ್ತಾಳೆ. ಪ್ರೋಷಿತ ಭರ್ತೃಕೆಯಾದ ವಾಸವದತ್ತೆಯನ್ನು ಕಂಡು ಅವಳಿಗೆ ಏನೋ ಒಂದು ಬಗೆಯ ಕನಿಕರ. ದೂರದಿಂದಲೇ ಅವಳ ದೈನ್ಯಾವಸ್ಥೆ ಯನ್ನು ಕಂಡು ಮರುಗುತ್ತಾಳೆ. ಪ್ರಿಯಂಗುಲತೆಯ ಕಲ್ಲುಕಟ್ಟೆಯಮೇಲೆ

ಕುಳಿತು, ಮಂಜುಮುಚ್ಚಿದ ಚಂದ್ರಲೇಖೆಯಂತೆ ಚಿಂತೆಯಿಂದ ಶೂನ್ಯ ಹೃದಯಳಾಗಿ ಕಾಣಿಸುತ್ತಿದ್ದ, ಅಲಂಕಾರಮಾಡಿಕೊಳ್ಳದಿದ್ದರೂ (ಸಖಿಯ ಮದುವೆಯೆಂದು) ಮಂಗಳಕರವಾದ ಉಡುಗೆ ತೊಟ್ಟಿದ್ದ ವಾಸವದತ್ತೆಯ ಹತ್ತಿರಕ್ಕೆ ಹೋಗಿ 'ಎಷ್ಟು ಹುಡುಕಲಿ ನಿನ್ನನ್ನು?' ಎನ್ನುತ್ತಾಳೆ.

'ಏತಕ್ಕಾಗಿ?'—ಸಹಜವಾಗಿಯೇ ವಾಸವದತ್ತೆ ಕೇಳುತ್ತಾಳೆ.

'ನೀನು ಮಹಾಕುಲಪ್ರಸೂತೆ, ಸ್ನೇಹಮಯಿ, ನಿಪುಣೆಯಂತೆ; ಭಟ್ಟಿನಿ ಹೇಳುತ್ತಾಳೆ. ಆದ್ದರಿಂದ ಈ ವರಣಮಾಲಿಕೆಯನ್ನು ಕಟ್ಟಿಕೊಡು.'

'ಯಾರಿಗಾಗಿ ಕಟ್ಟಬೇಕು? (ವರನಿಗಾಗಿಯೋ, ವಧುವಿಗಾಗಿಯೋ?)'

'ನಮ್ಮ ರಾಜಕುಮಾರಿಗಾಗಿ.'

'ಇದನ್ನೂ ನಾನೇ ಮಾಡಬೇಕಾಗಿ ಬಂತೆ? ದೇವರು ಎಷ್ಟು ನಿಷ್ಕರುಣಿ!' ಎಂದು ಮನಸ್ಸಿನಲ್ಲೇ ಕೊರಗುತ್ತಾ ಸುಮ್ಮನೆಯೇ ಇರುತ್ತಾಳೆ. ಆದರೆ ಚೇಟಿ ಪುನಃ 'ಈಗ ಏನೋ ಯೋಚನೆಮಾಡುತ್ತ ಹೊತ್ತುಮಾಡಬೇಡ. ಅಳಿಯ ಆಗಲೇ ಮಂಗಳಸ್ನಾನ ಮಾಡುತ್ತಿದ್ದಾನೆ. ಬೇಗ ಕಟ್ಟಿಕೊಡು' ಎನ್ನುತ್ತಾಳೆ. ವಾಸವದತ್ತೆಗೆ ಸ್ವಲ್ಪ ಮಾತಿಗೆ ಅವಕಾಶ ಸಿಕ್ಕಿತು. ಕೇಳುತ್ತಾಳೆ—

'ಅಳಿಯನನ್ನು ನೋಡಿದಿಯಾ?'

'ಓಹೋ! ನಮ್ಮ ರಾಜಕುಮಾರಿಯ ಗಂಡನಾಗುವವನು. ಅಲ್ಲದೆ ನಮ್ಮ ಕುತೂಹಲ ಬೇರೆ.'

'ಹೇಗಿದ್ದಾನೆ?'

'ಇಂತಹವನನ್ನು ಹಿಂದೆಂದೂ ನಾನು ಕಂಡಿದ್ದಿಲ್ಲ.'—ಚೇಟಿ ಒಳ್ಳೆಯ ಅಭಿಪ್ರಾಯದಿಂದಲೇ ಈ ಮಾತು ಹೇಳಿದ್ದರೂ, ಸ್ಪಷ್ಟವಾಗಿಲ್ಲದ್ದರಿಂದ ವಾಸವದತ್ತೆ ವಿವರವಾಗಿ ಕೇಳುತ್ತಾಳೆ—

'ನೋಡಲು ಚೆನ್ನಾಗಿದ್ದಾನೆಯೇ, ಹೇಳು.'

'ಬಾಣ ಬಿಲ್ಲು ಇಲ್ಲದ ಕಾಮದೇವನೇ ಎನ್ನಬಹುದು.'—ತನ್ನ ಗಂಡನ ಬಗೆಗೆ ಈ ವರ್ಣನೆ ಕೇಳಿ ವಾಸವದತ್ತೆಗೆ ತಾನೂ ಅವನನ್ನು ಕಣ್ಣಾರ ಕಂಡಂತೆ ಒಳಗೊಳಗೇ ತೃಪ್ತಿಯಾಗಿರಬೇಕಲ್ಲವೆ! ಚೇಟಿ ಬೇಗ ಮಾಲೆ ಕಟ್ಟುವಂತೆ ಅವಸರಪಡಿಸುತ್ತಾಳೆ. ವಾಸವದತ್ತೆ ಮಾಲೆಯನ್ನು ಕಟ್ಟುತ್ತಾ ಹೂಗಳೊಡನೆ ಇದ್ದ ಎರಡು ಮೂಲಿಕೆಗಳಲ್ಲಿ ಒಂದನ್ನು ಎತ್ತಿಕೊಂಡು 'ಇದೇನು?' ಎಂದು ಕೇಳುತ್ತಾಳೆ.

'ಅವಿಧವಾಕರಣ ಎಂಬ ಮೂಲಿಕೆ'

ಅನ್ವರ್ಥವಾದ ಆ ಹೆಸರನ್ನು ಕೇಳಿ 'ಇದನ್ನು ಹೆಚ್ಚಾಗಿ ಕಟ್ಟಬೇಕು, ನನ

ಗಾಗಿಯೂ ಪದ್ಮಾವತಿಗಾಗಿಯೂ' ಎಂದುಕೊಂಡು, ಮತ್ತೊಂದು ಮೂಲಿಕೆಯ ಹೆಸರನ್ನು ಕೇಳುತ್ತಾಳೆ.

'ಸಪತ್ನೀಮರ್ದನ'

'ಇದನ್ನು ಕಟ್ಟಬೇಕಾಗಿಲ್ಲ!' ವೈಮರೆತು ವಾಸವದತ್ತೆ ಹೀಗನ್ನುವಾಗ ಅವಳ ಅಭಿಪ್ರಾಯ ಅದನ್ನು ಕಟ್ಟಿದರೆ ಸಪತ್ನಿಯಾದ ತನಗೇ ತೊಂದರೆ ಯಾದೀತೆಂಬುದು. ಚೇಟಿಗೆ ಇದು ಅರ್ಥವಾಗದೆ ಕೇಳುತ್ತಾಳೆ.—

'ಏತಕ್ಕಾಗಿ'

'ಅವನ ಮೊದಲ ಹೆಂಡತಿ ಸತ್ತುಹೋಗಿದ್ದಾಳಲ್ಲ, ಆದ್ದರಿಂದ ನಿಷ್ಪ್ರಯೋಜನ ಎಂದು.'

ಇಬ್ಬರು ಹೆಂಗಸರು ಸೇರಿದರೆ ಕೇಳಬೇಕೆ! ಮಾತು ಹೇಗೆ ಹೇಗೋ ಬೆಳೆಯುತ್ತಲೇ ಹೋಗುತ್ತದೆ, ಕಾಲದ ಅರಿವೇ ಇಲ್ಲದಂತೆ. ಮದುವೆಯ ಮುಹೂರ್ತ ಹತ್ತಿರಕ್ಕೆ ಬರಲು ಮತ್ತೊಬ್ಬ ಚೇಟಿ ಇವರಿಬ್ಬರನ್ನೂ ಹುಡುಕಿ ಕೊಂಡು ಬಂದು ಮಾಲೆಯನ್ನು ಬೇಗ ಕಟ್ಟಿಸಿ ತೆಗೆದುಕೊಂಡು ಮೊದಲನೆಯ ಚೇಟಿಯೊಡನೆ ಮದುವೆಯ ಮಂಟಪಕ್ಕೆ ತೆರಳುತ್ತಾಳೆ. ವಾಸವದತ್ತೆಯೂ 'ಆರ್ಯಪುತ್ರನೂ ಬೇರೆಯವಳವನಾಗಿಬಿಟ್ಟನಲ್ಲ!' ಎಂಬ ಒಂದೇ ದುಗುಡದಿಂದ 'ನಿದ್ದೆ ಯಾದರೂ ಬರುತ್ತದೆಯೆ ನೋಡುತ್ತೇನೆ' ಎಂದು ತನ್ನ ಬಿಡಾರಕ್ಕೆ ಹೋಗುತ್ತಾಳೆ. ಹೀಗೆ ಮೂರನೆಯ ಅಂಕ ಕೊನೆಗೊಳ್ಳುತ್ತದೆ.

ಈ ಮೂರು ಅಂಕಗಳೂ ಒಂದು ರೀತಿಯಲ್ಲಿ ವಾಸವದತ್ತೆಯ ಕಥೆಯೇ. ಪದ್ಮಾವತಿ ಒಂದು ಫಲಕದ ಹಾಗೆ; ಆ ಫಲಕದ ಮೇಲೆ ಮೂಡಿಬಂದಿರುವ ಚಿತ್ರ ವಾಸವದತ್ತೆಯದು. ಭಾಸನ ಚಿತ್ರರಚನಾಕೌಶಲ ಅನ್ಯಾದೃಶವಾದುದು. ವಾಸವದತ್ತೆಯ ಚಿತ್ರಕ್ಕೆ ಪದ್ಮಾವತಿ ಆಧಾರ ಮಾತ್ರ; ಅದೂ ಉತ್ತಮವಾದ ಫಲಕದಂತೆ. ಒಳ್ಳೆಯ ಚಿತ್ರವೇ ಆದರೂ ಅದಕ್ಕೆ ಕಳೆ ಕೊಡುವುದು ಅದರ ಆಧಾರ ಫಲಕವೇ!

* * *

ಈ ನಾಟಕದ ನಾಯಕಿ ವಾಸವದತ್ತೆಯೆಂಬುದರಲ್ಲಿ ಸಂದೇಹಕ್ಕೆ ಅವಕಾಶವೇ ಇಲ್ಲ. ಈ ನಾಟಕದಲ್ಲಿ ಪದ್ಮಾವತಿ ಬಾರದಿರುವ ಅಂಕಗಳಿವೆ. ನಾಯಕನೆನಿಸಿದ ವತ್ಸರಾಜನೂ ಬಾರದ ಅಂಕಗಳಿವೆ. ಆದರೆ ವಾಸವದತ್ತೆ ಬಾರದ ಅಂಕವಿಲ್ಲ. ವತ್ಸರಾಜನನ್ನು ನಾವು ಮೊದಲಬಾರಿಗೆ ಕಾಣುವುದು ಈ ನಾಲ್ಕನೆಯ ಅಂಕದಲ್ಲೇ.

ಇದೇನು ಮೂರು ಅಂಕಗಳು ಮುಗಿದರೂ ಕಥಾನಾಯಕನ ಸುಳಿವೇ ಇಲ್ಲವಲ್ಲ ಎಂದು ಪ್ರೇಕ್ಷಕರು ಭಾವಿಸುವುದಕ್ಕೆ ಸರಿಯಾಗಿ, ಇದೋ ಈ ಅಂಕದಲ್ಲಿ ನಾಯಕನಾದ ವತ್ಸರಾಜ ಉದಯನ ಬರುತ್ತಾನೆ ಎಂಬುದನ್ನು ಸೂಚಿಸುವುದಕ್ಕೋ ಎಂಬಂತೆ ನಾಯಕನ ಪ್ರಿಯಸಖನಾದ ವಿದೂಷಕನೇ ಮೊದಲು ನಮ್ಮ ಮುಂದೆ ಬಂದು ಚೇಟಿಯೊಡನೆ ಮಾತಾಡುವ ನೆಪದಲ್ಲಿ ಸ್ವಲ್ಪ ಹಾಸ್ಯಮಯ ಸನ್ನಿವೇಶವನ್ನು ಕಲ್ಪಿಸಿ ಪ್ರೇಕ್ಷಕರನ್ನು ತಣಿಸುತ್ತಾನೆ. ಈ ಹಾಸ್ಯವೂ ಇಲ್ಲದಿದ್ದರೆ ಇವರಿಬ್ಬರ ಸಂಭಾಷಣಾರೂಪವಾದ ಪ್ರವೇಶಕವೂ ಎರಡನೆಯ ಅಂಕದ ಆದಿಯಲ್ಲಿ ಬರುವ ಪ್ರವೇಶಕದಂತೆಯೇ ನಿರರ್ಥಕವಾಗಿ ಬಿಡುತ್ತಿತ್ತೆಂದು ಧಾರಾಳವಾಗಿ ಹೇಳಬಹುದು.

ಪದ್ಮಾವತಿ – ಉದಯನರ ಮದುವೆ ವಿಜೃಂಭಣೆಯಿಂದ ನೆರವೇರಿದ ಮೇಲೂ ಉದಯನ ಕಾರಣಾಂತರದಿಂದ ಮಗಧರಾಜನ ಅರಮನೆಯಲ್ಲೇ ಇದ್ದಾನೆ. ಪದ್ಮಾವತೀ-ವಾಸವದತ್ತೆಯರ ಸ್ನೇಹ ಎಂದಿನಂತೆ ಬೆಳೆಯುತ್ತಲೇ ಇದೆ. ಒಂದು ದಿನ ಇಬ್ಬರೂ ಪ್ರಮದವನಕ್ಕೆ ಬಂದು ಅರಳಿದ ಶೇಫಾಲಿಕಾ ಕುಸುಮಗಳ ಸೊಬಗನ್ನು ವೀಕ್ಷಿಸಿ ಬೆರಗಾಗುತ್ತಾರೆ. ಹೋಳಾದ ಮಣಿ ಶಿಲೆಯ ಹರಳುಗಳಂತಿದ್ದ ಶೇಫಾಲಿಕಾಕುಸುಮಗಳನ್ನು ಚೇಟಿ ತನ್ನ ಬೊಗಸೆ ತುಂಬ ಕುಯ್ದುತಂದು ಪದ್ಮಾವತಿಗೆ ತೋರಿಸಿ 'ಇನ್ನೂ ಕುಯ್ಯಲೇ?' ಎಂದು ಕೇಳುತ್ತಾಳೆ. ಅದಕ್ಕೆ ಪದ್ಮಾವತಿ

'ಬೇಡ, ಬೇಡ; ಆರ್ಯಪುತ್ರ ಇಲ್ಲಿಗೆ ಬಂದಾಗ ಈ ಕುಸುಮ ಸಮೃದ್ಧಿಯನ್ನು ವೀಕ್ಷಿಸಿದರೆ ನಾನು ಸಮ್ಮಾನಿತಳಾದೇನು.'

'ಸಖಿ, ನಿನ್ನ ಪತಿ ನಿನಗೆ ಪ್ರಿಯನಾಗಿದ್ದಾನೆಯೆ?' ಇದಕ್ಕೆ ಕಪಟವರಿಯದ ಪದ್ಮಾವತಿಯ ನೇರವಾದ ಉತ್ತರ—'ಆರ್ಯೆ, ನಾನರಿಯೆ. ಆರ್ಯಪುತ್ರನನ್ನಗಲಿದಾಗ ಉತ್ಕಂಠಿತಳಾಗಿರುತ್ತೇನೆ.'

'ಇವಳೂ ಹೀಗೆ ಹೇಳಬೇಕಾದರೆ ನಾನು ದುಷ್ಕರವಾದುವನ್ನೇ ಮಾಡುತ್ತಿದ್ದೇನೆ.' ಎಂದು ವಾಸವದತ್ತೆ ತನ್ನೊಳಗೇ ಹೇಳಿಕೊಂಡರೆ, ಚೇಟಿ 'ರಾಜಕುಮಾರಿ ಎಷ್ಟು ಉತ್ತಮ ರೀತಿಯಲ್ಲಿ ತನ್ನ ಗಂಡ ತನಗೆ ಪ್ರಿಯನೆಂಬುದನ್ನು ತಿಳಿಸಿದ್ದಾಳೆ!' ಎಂದು ಸಂತೋಷದಿಂದ ಮೆಚ್ಚಿಕೊಳ್ಳುತ್ತಾಳೆ. ಋಜುಸ್ವಭಾವದ ಪದ್ಮಾವತಿಗೇ ಒಂದು ಸಂದೇಹ. ಅದನ್ನವಳೇ ಎಲ್ಲರೆದುರಿಗೂ ಪ್ರಕಟಿಸುತ್ತಾಳೆ—'ಆರ್ಯಪುತ್ರ ನನ್ನ ವಿಷಯದಲ್ಲಿರುವ ಹಾಗೆಯೇ ವಾಸವದತ್ತೆಯ ವಿಷಯದಲ್ಲೂ ಇದ್ದನೇ ಎಂಬುದೇ ನನಗೆ ಸಂದೇಹವಾಗಿದೆ' ಎಂದು. ವಾಸವದತ್ತೆ ತಟ್ಟನೆ ಹೇಳಿಬಿಡುತ್ತಾಳೆ—

'ಅದಕ್ಕೂ ಹೆಚ್ಚಾಗಿ ಇದ್ದ.' ಪದ್ಮಾವತಿ ಸಹಜವಾಗಿ ಕೇಳುತ್ತಾಳೆ—'ನೀನು ಹೇಗೆ ಬಲ್ಲೆ?' ಎಂದು. ಗಂಡನ ಮೇಲಣ ಪಕ್ಷಪಾತದಿಂದ ವಾಸವದತ್ತೆ ತನ್ನ ಸ್ಥಿತಿಯನ್ನು ಮರೆತು ಹಾಗೆ ಹೇಳಿದ್ದು ತಪ್ಪಾಯಿತೆಂದು ತಿಳಿದಕೂಡಲೇ ಚಾಕಚಕ್ಯತೆಯಿಂದ ಯಾರಿಗೂ ಸಂದೇಹ ಬಾರದಂತೆ ಹೇಳುತ್ತಾಳೆ—'ಅವನ ಪ್ರೀತಿ ಅಲ್ಪವಾಗಿದ್ದರೆ ಅವಳು ಸ್ವಜನರನ್ನು ತೊರೆಯುತ್ತಿರಲಿಲ್ಲ.' ಮೂರು ಜನ ಹೆಂಗಸರು ಸೇರಿ ಮಾತಿಗೆ ಆರಂಭಿಸಿದಾಗ ಅದು ಯಾವ ಕಡೆ ಹೇಗೆ ಸಾಗುತ್ತದೆ ಹೇಳುವುದಕ್ಕಾಗದು. ಚೇಟಿ ಪದ್ಮಾವತಿಗೆ ಹೇಳುತ್ತಾಳೆ—'ನೀನೂ ವೀಣೆ ಕಲಿಯುವುದಾಗಿ ನಿನ್ನ ಪತಿಗೆ ಹೇಳು'

ಪದ್ಮಾ—ನಾನು ಹೇಳಿ ಆಯಿತು.

ವಾಸವ—ಅದಕ್ಕೆ ಏನು ಉತ್ತರ ಬಂತು?

ಪದ್ಮಾ—ಏನೂ ಹೇಳದೆ, ದೊಡ್ಡದಾಗಿ ನಿಟ್ಟುಸಿರುಬಿಟ್ಟು ಸುಮ್ಮನಾಗಿಬಿಟ್ಟ.

ವಾಸವ—ಅದರಿಂದ ನೀನು ಊಹಿಸುವುದೇನು?

ಪದ್ಮಾ—ವಾಸವದತ್ತೆಯ ಗುಣಗಳನ್ನು ನೆನೆದು, ದಾಕ್ಷಿಣ್ಯದಿಂದ ನನ್ನೆದುರಿಗೆ ಅಳಲಿಲ್ಲ, ಎಂದು. ಈ ಮಾತು ಕೇಳಿ ವಾಸವದತ್ತೆಗೆ ಎಷ್ಟೋ ಸಮಾಧಾನ. 'ಇದು ನಿಜವೇ ಆಗಿದ್ದರೆ ನಾನೆಷ್ಟು ಧನ್ಯ!' ಎಂದುಕೊಳ್ಳುತ್ತಾಳೆ.

ಈ ವೇಳೆಗೆ ವಿದೂಷಕನೊಡನೆ ಉದಯನನೂ ಅದೇ ಪ್ರಮದವನಕ್ಕೆ ಬರುತ್ತಾನೆ. ಪದ್ಮಾವತಿಯಿಂದ ಕ್ಷಣಕಾಲದ ಅಗಲಿಕೆಯೂ ಅವನಿಗೆ ಸಹಿಸಲು ಕಷ್ಟಕರವಾಗಿದೆ. ವಿದೂಷಕ ಪದ್ಮಾವತಿಯೆಲ್ಲಿರಬಹುದೆಂದು ಹುಡುಕಾಡುತ್ತಾನೆ. ಅಷ್ಟರಲ್ಲಿ ನಿರ್ಮಲವಾದ ಆಕಾಶದಲ್ಲಿ ಸಾರಸಪಂಕ್ತಿ ಉದ್ದಕ್ಕೆ ಹಾರಿ ಹೋಗುವುದನ್ನು ವಿದೂಷಕನೂ ರಾಜನೂ ಗಮನಿಸಿ ಬೆರಗಾಗುತ್ತಾರೆ. ಬೇರೆಯ ಕಡೆ ಅಲ್ಲೇ ಇದ್ದ ಚೇಟಿಯೂ ಪದ್ಮಾವತಿಯ ಗಮನವನ್ನು ಅತ್ತ ಸೆಳೆಯುತ್ತಾಳೆ. ಆಕಡೆ ತಿರುಗಿದಾಗ ಉದಯನನು ಕಣ್ಣಿಗೆ ಬೀಳುತ್ತಾನೆ. ಗಂಡನನ್ನೇ ಪ್ರತೀಕ್ಷಿಸುತ್ತಿದ್ದ ಪದ್ಮಾವತಿಗೆ ಈಗ ಇಕ್ಕಟ್ಟು. ಜತೆಯಲ್ಲಿರುವ ವಾಸವದತ್ತೆಯನ್ನು ಬಿಟ್ಟು ಬಿಟ್ಟು ಸ್ವಾರ್ಥದೃಷ್ಟಿಯಿಂದ ತನ್ನ ಗಂಡನ ಬಳಿಗೆ ಹೋಗುವುದೇ? ಅಥವಾ ತನ್ನ ಪ್ರಿಯನು ತನ್ನನ್ನೇ ಹುಡುಕಿಕೊಂಡು ಬಂದಿರುವಾಗಲೂ ಅವನನ್ನು ಉಪೇಕ್ಷಿಸಿ ಸಖಿಯ ಜತೆಯಲ್ಲೇ ಇದ್ದುಬಿಡುವುದೇ? ವಾಸವದತ್ತೆಯನ್ನು ಇದ್ದಕ್ಕಿದ್ದಂತೆ ಬಿಟ್ಟುಹೋದರೆ, ಮೊದಲಿನಿಂದ ಪರಪುರುಷರ ದರ್ಶನವನ್ನು ಪರಿಹರಿಸುತ್ತಿರುವ ಪ್ರೋಷಿತಭರ್ತೃಕೆಯಾಗ ಅವಳು ಅಲ್ಲಿಂದ ಕಣ್ಮರೆಯಾಗುವುದಾದರೂ ಹೇಗೆ? ಇದನ್ನೆಲ್ಲಾ ಆಲೋಚಿಸಿ

ವಾಸವದತ್ತೆಗಾಗಿ ಅವಳೊಡನೆಯೇ ಇದ್ದು ಬಿಡುವುದೆಂದು ತೀರ್ಮಾನಿಸಿ ಪದ್ಮಾವತಿ ಪರಿವಾರದೊಡನೆ ಅಲ್ಲೇ ಇದ್ದ ಲತಾಮಂಟಪದೊಳಗೆ ಮರೆಯಾಗುತ್ತಾಳೆ.

ಇತ್ತ ವಿದೂಷಕ ಶೇಫಾಲಿಕಾಗುಚ್ಛಗಳು ಕುಯ್ದಿರುವುದನ್ನು ಗಮನಿಸಿ ಪದ್ಮಾವತಿ ಅಲ್ಲಿಗೆ ಬಂದು ಹೊರಟುಹೋಗಿರಬೇಕೆಂದು ವತ್ಸರಾಜನಿಗೆ ತಿಳಿಸುತ್ತಾನೆ. ಆ ಹೂಗಳ ಸೊಬಗನ್ನು ಇಬ್ಬರೂ ನೋಡಿ ಆನಂದಿಸಿ ಅಲ್ಲೇ ಇದ್ದ ಕಲ್ಲುಕಟ್ಟೆಯಮೇಲೆ ಕುಳಿತುಕೊಂಡು, ಅದು ಬಿಸಿಲಿನಿಂದ ಕಾದಿದ್ದುದರಿಂದ ಲತಾಮಂಟಪದೊಳಗೇ ಹೋಗೋಣವೆಂಬ ವಿದೂಷಕನ ಸಲಹೆಯಮೇಲೆ ರಾಜನೂ ಅತ್ತ ಸಾಗುತ್ತಾನೆ. 'ಮುಂದೇನು, ಹೀಗಾದರೆ?' ಎಂದು ಪ್ರೇಕ್ಷಕರ ಕುತೂಹಲ ಇತ್ತ ಹೆಚ್ಚುತ್ತಿದ್ದರೆ, ಅತ್ತ ಪದ್ಮಾವತಿ ಮುಂತಾದವರಿಗೆ 'ಇನ್ನೇನು ಗತಿ ಹೀಗಾದರೆ?' ಎನ್ನಿಸುತ್ತದೆ ಆದರೆ ಅಲ್ಲಿದ್ದ ಚೇಟಿ ಪ್ರತ್ಯುತ್ಪನ್ನಮತಿ. ಲತಾಮಂಟಪದ ದ್ವಾರದಬಳಿ ಇದ್ದ ಒಂದು ಬಳ್ಳಿಯನ್ನು ಅಲ್ಲಾಡಿಸಿ ಅದರ ಮೇಲಿದ್ದ ದುಂಬಿಗಳೆಲ್ಲಾ ಗಾಬರಿಯಿಂದ ಹಾರಾಡುವಹಾಗೆ ಮಾಡುತ್ತಾಳೆ. ವಿದೂಷಕ ಅವಕ್ಕೆ ಹೆದರಿ ಹೊರಗಡೆಯೇ ರಾಜನೊಡನೆ ಕುಳಿತುಕೊಳ್ಳುತ್ತಾನೆ. 'ಸದ್ಯ ಆರ್ಯಪುತ್ರ ಅಲ್ಲೇ ಕುಳಿತುಕೊಂಡನಲ್ಲ!' ಎಂದು ಪದ್ಮಾವತಿ ಸಮಾಧಾನ ಪಟ್ಟುಕೊಂಡರೆ, ಉದಯನನನ್ನು ಸಮೀಪದಲ್ಲಿ ಕಣ್ಣುತುಂಬ ನೋಡಿದ ವಾಸವದತ್ತೆಗೆ 'ಸದ್ಯ ಆರ್ಯಪುತ್ರ ಸ್ವಸ್ಥಶರೀರದಿಂದಿದ್ದಾನಲ್ಲ!' ಎಂದು ಸಮಾಧಾನವಾದರೂ ಕಣ್ಣುಗಳು ಕಂಬನಿಗೂಡುತ್ತವೆ. ಚೇಟಿ ಅದನ್ನು ಗಮನಿಸಿದಾಗ, 'ದುಂಬಿಗಳ ಹಾರಾಟದಿಂದ ಕಾಶಪುಷ್ಪಗಳ ಧೂಳು ಕಣ್ಣಿಗೆ ಬಿದ್ದು ಹೀಗಾಗಿದೆ' ಎಂದು ಸುಳ್ಳು ಕಾರಣ ಕೊಡುತ್ತಾಳೆ. ಎಲ್ಲವನ್ನೂ ನಂಬುವ ಸರಳಮನಸ್ಸಿನ ಪದ್ಮಾವತಿ ಅದನ್ನೂ ನಂಬುತ್ತಾಳೆ.

ವಿದೂಷಕ ಉದಯನ ಇವರಿಬ್ಬರ ನಡುವೆ ನಿರಾತಂಕವಾದ ಸಂಭಾಷಣೆ ಆರಂಭವಾಗುತ್ತದೆ. ಅಂತಹ ಏಕಾಂತವಾದ ಸನ್ನಿವೇಶದಲ್ಲಿ ಸುಮ್ಮನೆ ಮೌನವಾಗಿ ಕುಳಿತಿರುವುದಕ್ಕಾಗುತ್ತದೆಯೇ? ವಿದೂಷಕ ಕೇಳುತ್ತಾನೆ, ಸರಿಯಾದ ಪೀಠಿಕೆ ಹಾಕಿ—

'ನಿನಗೆ ಯಾರು ಹೆಚ್ಚು ಇಷ್ಟ? ಆಗಿನ ವಾಸವದತ್ತೆಯೋ, ಈಗಿನ ಪದ್ಮಾವತಿಯೋ?'

'ಇಂತಹ ಬಹುಮಾನಸಂಕಟದಲ್ಲೇಕೆ ನನ್ನನ್ನು ಸಿಕ್ಕಿಸುತ್ತೀ?'

'ನಿರ್ಭಯವಾಗಿ ಹೇಳಯ್ಯ, ಒಬ್ಬಳು ಸತ್ತುಹೋಗಿದ್ದಾಳೆ, ಮತ್ತೊಬ್ಬಳು ಇಲ್ಲಿಲ್ಲ.'

'ಇಲ್ಲ, ಇಲ್ಲ; ನಾನು ಹೇಳುವುದಿಲ್ಲ. ನೀನು ಬಾಯಾಳಿ.'—ಉದಯನ ಏನು

ಹೇಳುತ್ತಾನೋ ಎಂದು ಬಾಯಿಬಿಟ್ಟುಕೊಂಡು ಕಾದಿದ್ದ ಪದ್ಮಾವತಿಗೆ ಈ ಮಾತಿನಿಂದಲೇ ಅವನ ಹೃದಯ ಸ್ಪಷ್ಟವಾಗಿ ತಿಳಿದುಹೋಗುತ್ತದೆ. ವಾಸವ ದತ್ತೆಯ ಮನೋಭಾವ ಹೇಗಾಗಿದ್ದಿರಬೇಕೆಂಬುದನ್ನಂತು ಭಾಸ ವಾಚಕ ಪ್ರೇಕ್ಷಕರ ಊಹೆಗೇ ಬಿಟ್ಟುಬಿಟ್ಟಿದ್ದಾನೆ.

ವಿದೂಷಕನ ನಿರ್ಬಂಧ ಹೆಚ್ಚುತ್ತದೆ. 'ನಿಜ ಹೇಳದಿದ್ದರೆ ನಮ್ಮ ಸ್ನೇಹದ ಮೇಲೆ ಆಣೆ' ಎಂದೂ ಹೇಳಿ, ವಿದೂಷಕ ಉದಯನನ ಬಾಯಿಂದ ಉತ್ತರ ಹೊರಡಿಸುತ್ತಾನೆ—

'ರೂಪ ಶೀಲ ಮಾಧುರ್ಯಗಳಿಂದ ಪದ್ಮಾವತಿಯೇನೋ ನನಗೆ ಮೆಚ್ಚಿಗೆ ಯಾದವಳೇ! ಆದರೂ ವಾಸವದತ್ತೆಯಲ್ಲಿ ನೆಟ್ಟಿರುವ ನನ್ನ ಮನಸ್ಸನ್ನವಳು ಸೆಳೆದು ಕೊಳ್ಳಲಾರಳು.'

ಈ ಮಾತು ಕೇಳಿ ವಾಸವದತ್ತೆಯ ಸಮಾಧಾನಕ್ಕೆ ಪಾರವೇ ಇಲ್ಲ. 'ನನ್ನ ಈ ಪರಿಖೇದಕ್ಕೆ ಪ್ರತಿಫಲ ಸಿಕ್ಕಿತು. ಅಜ್ಞಾತವಾಸದಲ್ಲೂ ಬಹಳ ಗುಣವಿದೆ' ಎಂದುಕೊಳ್ಳುತ್ತಾಳೆ. ಪದ್ಮಾವತಿಯ ಬಗೆಗೆ ಉದಯನನಾಡಿದ ಮಾತು ಚೇಟಿಗೆ ಹಿಡಿಸುವುದಿಲ್ಲ. ಉದಯನನನ್ನು 'ಅದಾಕ್ಷಿಣ್ಯಪರ' ಎನ್ನುತ್ತಾಳೆ. ಆದರೆ ಪದ್ಮಾವತಿ ಉದಯನನನ್ನೇ ಸಮರ್ಥಿಸಿ 'ಈಗಲೂ ಆರ್ಯೆ ವಾಸವದತ್ತೆಯ ಗುಣಗಳನ್ನು ಸ್ಮರಿಸುತ್ತಿರುವ ಆರ್ಯಪುತ್ರ ಸದಾಕ್ಷಿಣ್ಯನೇ ಅಲ್ಲವೆ?' ಎನ್ನುತ್ತಾಳೆ. ವಾಸವದತ್ತೆಗೆ ಪದ್ಮಾವತಿಯ ಈ ಮಾತು ತುಂಬ ಮೆಚ್ಚಿಗೆಯಾಗಿ 'ನಿನ್ನ ಕುಲೋನ್ನತಿಗೆ ತಕ್ಕ ಮಾತು' ಎಂದು ಅಭಿನಂದಿಸುತ್ತಾಳೆ.

ಈಗ ರಾಜನ ಸರದಿ. ವಿದೂಷಕನನ್ನು ಕೇಳುತ್ತಾನೆ—'ನೀನು ಹೇಳು; ನಿನಗೆ ಯಾರು ಇಷ್ಟ—ಆಗಿನ ವಾಸವದತ್ತೆಯೋ? ಈಗಿನ ಪದ್ಮಾವತಿಯೋ?'

ವಿದೂಷಕನೂ ಮೊದಲು ಉತ್ತರ ಹೇಳುವುದಿಲ್ಲ. ರಾಜನ ನಿರ್ಬಂಧಕ್ಕೂ ಮಣಿಯುವುದಿಲ್ಲ ಕೊನೆಗೆ 'ಮಹಾಬ್ರಾಹ್ಮಣನು ಪ್ರಸನ್ನನಾಗಿ ಸ್ವಪ್ರೇರಣೆಯಿಂದ ಹೇಳುವುದಾಗಲಿ' ಎಂದಾಗ ವಿದೂಷಕ ಹೇಳುತ್ತಾನೆ—"ಹಾಗಾದರೆ ಈಗ ಹೇಳು ತ್ತೇನೆ; ಕೇಳು. ನನಗೆ ವಾಸವದತ್ತೆ ಇಷ್ಟ. ದೇವಿ ಪದ್ಮಾವತಿ ತರುಣಿ, ಸುಂದರಿ, ಕೋಪವಿಲ್ಲದವಳು, ನಿರಹಂಕಾರಿ, ಮಧುರಭಾಷಿಣಿ, ದಾಕ್ಷಿಣ್ಯಪರೆ. ಇನ್ನೊಂದು ದೊಡ್ಡ ಗುಣವೆಂದರೆ, ರಸವತ್ತಾದ ಭೋಜನದೊಡನೆ 'ಆರ್ಯವಸಂತಕ ಎಲ್ಲಿಹೋಗಿದ್ದನೋ!' ಎಂದು ನನ್ನನ್ನು ಎದುರುಗೊಂಡು ಬರುತ್ತಾಳೆ."

ವಿದೂಷಕನ ಈ ಮಾತು ಎಲ್ಲರಲ್ಲೂ ಮುಗುಳ್ನಗೆ ಮೂಡಿಸುತ್ತದೆ. ಘೊಳ್ಳೆಂದು ನಗುವಂತೆ ಮಾಡುವುದಿಲ್ಲ. ಅದೇ ಭಾಸನ ಹಾಸ್ಯದ ವೈಶಿಷ್ಟ್ಯ.

ವಾಸವದತ್ತೆಯೂ 'ವಸಂತಕ, ಇದು ನೆನಪಿರಲಿ' ಎಂದು ತನ್ನೊಳಗೇ ಹೇಳಿಕೊಳ್ಳುತ್ತಾಳೆ. ರಾಜನೂ ಹಳೆಯ ನೆನಪಿನ ಗುಂಗಿನಲ್ಲಿ 'ಇರಲಿ, ವಸಂತಕ, ಇದನ್ನೆಲ್ಲಾ ದೇವಿ ವಾಸವದತ್ತೆಗೆ ತಿಳಿಸುತ್ತೇನೆ' ಎನ್ನುತ್ತಾನೆ. ವಿದೂಷಕ ರಾಜನ ಮರೆವನ್ನು ಹಾಸ್ಯಮಾಡಲೋ ಎಂಬಂತೆ 'ಅಯ್ಯೋ ವಾಸವದತ್ತೆಯೆ! ಎಲ್ಲಿಯ ವಾಸವದತ್ತೆ? ಅವಳೆಂದೋ ಸತ್ತುಹೋದಳಲ್ಲವೆ?' ಎನ್ನುತ್ತಾನೆ. ರಸಮಯವಾಗಿ ಅಲ್ಲಿಯವರೆಗೆ ಸಾಗಿದ್ದ ಸಂಭಾಷಣೆ ತಟ್ಟನೆ ನಿಂತುಹೋಗಿ, ರಾಜನಿಗೆ ಆಗಿನ ಸನ್ನಿವೇಶದ ಅರಿವು ಮರಳಿ ಬಂದು, ಅಲ್ಲಿನ ವಾತಾವರಣವೇ ಬದಲಾಗಿಬಿಡುತ್ತದೆ. ಪದ್ಮಾವತಿ 'ಎಂತಹ ರಮಣೀಯವಾದ ಕಥಾಯೋಗ ಇವನಿಂದ ತಪ್ಪಿಹೋಯಿತಲ್ಲ!' ಎಂದು ನಿಷ್ಕಲ್ಮಷ ಮನಸ್ಸಿನಿಂದ ಮರುಗುತ್ತಾಳೆ. ವಾಸವದತ್ತೆ 'ಅಪ್ರತ್ಯಕ್ಷವಾಗಿ ಕೇಳುವ ಈ ಬಗೆಯ ಮಾತು ಅದೆಷ್ಟು ಪ್ರಿಯ!' ಎಂದು ಒಳಗೇ ಹಿಗ್ಗುತ್ತಾಳೆ. 'ಬದ್ಧಮೂಲವಾದ ಅನುರಾಗ ತೊರೆಯುವುದು ಕಷ್ಟ. ನೆನೆದಂತೆಲ್ಲಾ ದುಃಖ ಹೊಸಹೊಸದಾಗುತ್ತದೆ. ಕಣ್ಣೀರು ಹರಿಸಿ ಹರಿಸಿ ಮನಸ್ಸು ಹಗುರಾಗಬೇಕು.' ಎಂದು ಉದಯನನೂ ತನ್ನ ಅವಸ್ಥೆಯನ್ನು ವಿದೂಷಕನಿಗೆ ವಿವರಿಸುತ್ತಾನೆ. ಅವನ ಮುಖವೆಲ್ಲ ಕಣ್ಣೀರಿನಿಂದ ತೊಯ್ದಿರುವುದನ್ನು ವಿದೂಷಕ ಕಂಡು ಮುಖ ತೊಳೆಯಲೆಂದು ನೀರು ತರಲು ಹೋಗುತ್ತಾನೆ. ಉದಯನನೂ ಮುಖ ತಗ್ಗಿಸಿ ಕುಳಿತಿದ್ದಾನೆ. ಈ ಸಮಯ ಸಾಧಿಸಿ 'ಈಗ ಹೊರಟು ಹೋಗೋಣ' ಎಂದು ಪದ್ಮಾವತಿ ವಾಸವದತ್ತೆಗೆ ಸೂಚಿಸುತ್ತಾಳೆ. ವಾಸವದತ್ತೆ ಅದಕ್ಕೆ 'ನೀನು ಇಲ್ಲೇ ನಿಲ್ಲು. ಉತ್ಕಂಠಿತನಾಗಿರುವ ಪತಿಯನ್ನು ಬಿಟ್ಟುಹೋಗುವುದು ಸರಿಯಲ್ಲ. ನಾನು ಮಾತ್ರ ಹೋಗುತ್ತೇನೆ' ಎನ್ನುತ್ತಾಳೆ. ಪದ್ಮಾವತಿಗೆ ದಾಕ್ಷಿಣ್ಯ. ಇರುವುದಕ್ಕೂ ಮನಸ್ಸು, ವಾಸವದತ್ತೆಯೊಡನೆ ಹೊರಟುಹೋಗಬೇಕೆಂದೂ ಮನಸ್ಸು. ಆದರೆ ಈಗ ಹಿಂದಿನಂತಹ ಇಕ್ಕಟ್ಟಿನ ಪರಿಸ್ಥಿತಿಯಿಲ್ಲ ಆದ್ದರಿಂದ 'ಹಾಗಾದರೆ ನಾನು ಆರ್ಯಪುತ್ರನ ಬಳಿಗೆ ಹೋಗಲೆ?' ಎಂದು ಪುನಃ ಪುನಃ ವಾಸವದತ್ತೆಯನ್ನು ಕೇಳಿ, ಅವಳ ಅನುಮತಿ ಪಡೆದು, ಉದಯನನ ಹತ್ತಿರಕ್ಕೆ ಹೋಗುತ್ತಾಳೆ. ವಾಸವದತ್ತೆ ಅಲ್ಲಿಂದ ಮರೆಯಾಗುತ್ತಾಳೆ.

ಅಷ್ಟುಹೊತ್ತಿಗೆ ವಿದೂಷಕನೂ ನಳಿನೀ ಪತ್ರದಲ್ಲಿ ನೀರುತಂದು ನೋಡುತ್ತಾನೆ,—ಉದಯನನ ಬಳಿ ಪದ್ಮಾವತಿ ನಿಂತಿದ್ದಾಳೆ! 'ಇದೇನು ವಸಂತಕ?' ಎಂದು ಕೇಳಿಯೂ ಬಿಡುತ್ತಾಳೆ. ವಿದೂಷಕನಿಗೋ ಗಾಬರಿ. ಇದು ಇದು, ಇದು ಇದು ಎಂದು ಮೊದಲು ತಡವರಿಸುತ್ತಾನೆ. ಆಮೇಲೆ 'ಗಾಳಿಗೆ ತೂರಿಬಂದ ಕಾಶಪುಷ್ಪದ ಧೂಳು ಬಿದ್ದು ಪ್ರಭುವಿನ ಮುಖ ಕಂಬನಿಗೊಂಡಿದೆ. ಆದ್ದರಿಂದ ಮುಖ

ತೊಳೆಯಲು ಈ ನೀರು ತೆಗೆದುಕೊ' ಎಂದು ಹೇಳುತ್ತಾನೆ. ನಿಜಸ್ಥಿತಿ ತಿಳಿದಿದ್ದ ಪದ್ಮಾವತಿ 'ದಾಕ್ಷಿಣ್ಯಪರನಾದ ಪ್ರಭುವಿನ ಪರಿಜನರೂ ದಾಕ್ಷಿಣ್ಯಪರರೇ' ಎಂದು ಮನಸ್ಸಿನೊಳಗೇ ಹೇಳಿಕೊಳ್ಳುತ್ತಾ 'ಆರ್ಯಪುತ್ರನಿಗೆ ಜಯವಾಗಲಿ' ಎನ್ನುತ್ತಾಳೆ. ರಾಜನಿಗೂ ಗಾಬರಿಯಾಗುತ್ತದೆ. ವಿದೂಷಕನ ಸಲಹೆಯ ಮೇಲೆ ಅವನೂ ಕಾಶಪುಷ್ಪದ ಧೂಳು ಕಣ್ಣಿಗೆ ಬಿದ್ದ ಕಾರಣವನ್ನೇ ಬಹಿರಂಗವಾಗಿ ಹೇಳಿದರೂ, ಅಂತರಂಗವಾಗಿ 'ಹೊಸದಾಗಿ ಮದುವೆಯಾದ ಹುಡುಗಿ ಸತ್ಯವನ್ನು ಕೇಳಿದರೆ ವ್ಯಥೆಗೊಂಡಾಳು. ಇವಳೇನೋ ಧೀರಸ್ವಭಾವದವಳೇ ಆಗಿದ್ದರೂ ಕಾತರಗೊಳ್ಳುವುದು ಸ್ತ್ರೀಯರ ಸ್ವಭಾವ' ಎಂದುಕೊಳ್ಳುತ್ತಾನೆ ಈ ಪರಿಸ್ಥಿತಿಯಲ್ಲಿ ಪ್ರಮದವನದಲ್ಲಿದ್ದರೂ ನೆಮ್ಮದಿ ಎಲ್ಲಿಂದ ಬರಬೇಕು? ವಿದೂಷಕ ಹೇಳುತ್ತಾನೆ.—'ಅಪರಾಹ್ನದಲ್ಲಿ ಮಗಧರಾಜನನ್ನು ಸ್ನೇಹಿತರು ಕಾಣಲು ಬರುತ್ತಾರೆ. ಆಗ ನೀನೂ ಅಲ್ಲಿರುವುದು ಉಚಿತ. ಸತ್ಕಾರವು ಪ್ರತಿಯಾಗಿ ಮಾಡಿದ ಸತ್ಕಾರದಿಂದ ಕೂಡಿಕೊಂಡರೇನೇ ಪ್ರೀತಿ ಬೆಳೆಯುವುದು.' ರಾಜನೂ ಅಲ್ಲಿಂದ ತೆರಳುತ್ತಾ 'ಉಪಕಾರ_ಸತ್ಕಾರಗಳನ್ನು ಉದಾರವಾಗಿ ಮಾಡುವವರು ಈ ಲೋಕದಲ್ಲಿ ಎಷ್ಟೋ ಜನ ಇದ್ದಾರೆ. ಆದರೆ ಅದನ್ನು ಮನಗಾಣುವವರು ವಿರಳ' ಎಂದು ವಿದೂಷಕನ ಮಾತನ್ನೇ ಪುಷ್ಟೀಕರಿಸುತ್ತಾನೆ.

'ರಮಣೀಯವಾದ ಕಥಾಯೋಗ'ವುಳ್ಳ ನಾಲ್ಕನೆಯ ಅಂಕ ಈ ರೀತಿ ಮುಗಿಯುತ್ತದೆ. ಲತಾಮಂಟಪದೊಳಗಿರುವ ಪ್ರೇಮಿಗಳ ಸಲ್ಲಾಪವನ್ನು ಹೊರಗಿರುವವರು ಹೊಂಚು ಕೇಳುವ ಸನ್ನಿವೇಶ ಅನೇಕ ಸಂಸ್ಕೃತ ನಾಟಕಗಳಲ್ಲಿ ಬರುತ್ತದೆ. ಆದರೆ ಅಲ್ಲೆಲ್ಲೂ ಇಂತಹ ಮಧುರ ಕಥಾಪ್ರಸಂಗವಿಲ್ಲ. ಅವೆಲ್ಲ ಪ್ರಾಯಃ ಭಾಸನ ಈ ಕಥಾಸಂವಿಧಾನದ ಅನುಕರಣಗಳೆಂದರೂ ತಪ್ಪಾಗದು. ನಾಟಕವು ನಮ್ಮ ಜೀವನವನ್ನು, ಮನಸ್ಸಿನ ಒಳತೋಟಿಯನ್ನು, ಮಾನವ ಸ್ವಭಾವವನ್ನು ರಸಮಯ ಸನ್ನಿವೇಶಗಳ ಮೂಲಕ ಪ್ರತಿಬಿಂಬಿಸುವ ಕೈಗನ್ನಡಿಯೆನ್ನುವುದಾದರೆ ಕಥೆ ಬೆಳೆಯುತ್ತಲೇ ಹೋಗಬೇಕು ಎಂಬ ವಿಧಿಯಿಲ್ಲ ಎಂಬುದನ್ನು ಭಾಸನ ಈ ನಾಟಕದ ನಾಲ್ಕು ಐದನೆಯ ಅಂಕಗಳು ನಿದರ್ಶಿಸುತ್ತವೆ.

* * *

ಸ್ವಪ್ನವಾಸವದತ್ತ ನಾಟಕದ ನಾಲ್ಕನೆಯ ಅಂಕ 'ರಮಣೀಯ ಕಥಾಯೋಗ'ಕ್ಕೆ ಪ್ರಸಿದ್ಧವಾಗಿದ್ದರೆ ಅದರ ಐದನೆಯ ಅಂಕ ವಿರಹಿಪ್ರೇಮಿಗಳ ಅನಿರ್ವಚನೀಯಾನುಭವವೊಂದನ್ನು ಚಿತ್ರಿಸಿರುವ ರಮಣೀಯವಾದ ಸಂವಿಧಾನ ಕೌಶಲಕ್ಕೆ ನಿದರ್ಶನವಾಗಿದೆ. ಭಾಸನಿಗೇ ಈ ಅಂಕ ಅಚ್ಚುಮೆಚ್ಚು.

ಇದನ್ನು ಅವನೇ ಸ್ವಪ್ನಾಂಕವೆಂದು ಕರೆದನೋ ಇತ್ತೀಚಿನವರು ಅದಕ್ಕೆ ಆ ಹೆಸರಿಟ್ಟರೋ ಹೇಳುವುದು ಕಷ್ಟ. ಇದು ಮಾತ್ರ ನಿಜ. ಸ್ವಪ್ನಾಂಕ ಈ ನಾಟಕದ ಕೆನೆಯಿದ್ದಂತೆ ನಾಟಕ ನೋಡಿದಮೇಲೂ ಪ್ರೇಕ್ಷಕರ ಮನಸ್ಸಿನಲ್ಲಿ ಅಚ್ಚಳಿಯದೆ ಯಾವಜ್ಜೀವ ನಿಲ್ಲುವಂತಹುದು ಇದರಲ್ಲಿನ 'ಸ್ವಪ್ನ'. ಆ 'ಸ್ವಪ್ನ' ವನ್ನು ಸ್ವತಃ ಅನುಭವಿಸಿದ ಉದಯನ ವಾಸವದತ್ತೆಯರ ವಿಚಾರ ಹೇಳಬೇಕೆ? ಈ ಕಾರಣಗಳಿಂದಲೇ ನಾಟಕಕ್ಕೆ 'ಸ್ವಪ್ನನಾಟಕ' 'ಸ್ವಪ್ನವಾಸವದತ್ತನಾಟಕ' ಎಂಬ ಅನ್ವರ್ಥವೂ ಔಚಿತ್ಯಪೂರ್ಣವೂ ಆದ ಹೆಸರನ್ನು ಭಾಸನೇ ಕೊಟ್ಟಿದ್ದಾನೆಂಬುದು ಸುಸ್ಪಷ್ಟ.

ಈ ಸ್ವಪ್ನಾಂಕವನ್ನು ಮಾತ್ರವೇ ಪ್ರತ್ಯೇಕವಾಗಿಯೂ ಅಭಿನಯಿಸಲು ಯೋಗ್ಯವಾಗುವಂತೆ ಈ ಅಂಕದ ಆದಿಯಲ್ಲಿ ಒಂದು ಸಣ್ಣ ಪ್ರವೇಶಕ ಅಳವಡಿಸಲ್ಪಟ್ಟಿದೆ. ಪದ್ಮಾವತಿಯ ಚೇಟಿ ಪದ್ಮಿನಿಕೆ ಅವಸರವಸರವಾಗಿ ಮಧುರಿಕೆಯೆಂಬ ಮತ್ತೊಬ್ಬ ಚೇಟಿಯನ್ನು ಕರೆದು 'ಭರ್ತೃದಾರಿಕೆ ತುಂಬ ತಲೆನೋವಿನಿಂದ ನರಳುತ್ತಿದ್ದಾಳೆ, ಬೇಗ ಹೋಗಿ ವಾಸವದತ್ತೆಗೆ ತಿಳಿಸು. ಈ ವಿಚಾರ ತಿಳಿದೊಡನೆ ಅವಳೇ ಬಂದುಬಿಡುತ್ತಾಳೆ. ರಮಣೀಯವಾದ ಕಥೆ ಹೇಳಿ ನೋವು ಸಹ್ಯವಾಗುವಂತೆ ಮಾಡುತ್ತಾಳೆ' ಎಂದು ಹೇಳಿ 'ಸಮುದ್ರಗೃಹದಲ್ಲಿ ಹಾಸುಗೆ ಹಾಸಿದೆ' ಎಂದೂ ತಿಳಿಸುತ್ತಾಳೆ. ಮಧುಕರಿಕೆ ಅತ್ತ ಹೋದಮೇಲೆ ಪದ್ಮಿನಿಕೆ 'ವಿದೂಷಕನನ್ನು ಎಲ್ಲಿ ಪತ್ತೆಮಾಡಲಿ?' ಎಂದು ಯೋಚಿಸುತ್ತಿರುವಷ್ಟರಲ್ಲಿ ಅವನೇ ಅಲ್ಲಿಗೆ ಬಂದು 'ಇದೇನು ಪದ್ಮಿನಿಕಾ? ಇಲ್ಲಿ?' ಎಂದು ಕೇಳುತ್ತಾನೆ. ಪದ್ಮಾವತಿ ತಲೆನೋವಿನಿಂದ ಪೀಡಿತಳಾಗಿರುವಳೆಂಬುದನ್ನೂ ಸಮುದ್ರಗೃಹದಲ್ಲಿ ಶಯ್ಯೆ ರಚಿತವಾಗಿದೆಯೆಂಬುದನ್ನೂ ಪ್ರಭುವಿಗೆ (ಉದಯನನಿಗೆ) ತಿಳಿಸುವಂತೆ ಹೇಳಿ, ತಲೆಗೆ ಹಚ್ಚುವ ಮುಲಾಮನ್ನು ತರಲು ಪದ್ಮಿನಿಕೆ ತೆರಳುತ್ತಾಳೆ.

ಉದಯನನು, ಎರಡನೆಯ ಹೆಂಡತಿಯನ್ನು ಮದುವೆಯಾಗಿದ್ದರೂ, ತನ್ನ ಮೊದಲ ಹೆಂಡತಿಯಾದ ಅವಂತಿರಾಜಕುಮಾರಿಯನ್ನೂ ಅವಳ ಗುಣಗಳನ್ನೂ ಅವಳು ಸತ್ತುಹೋದ ಬಗೆಯನ್ನೂ ನೆನೆಯುತ್ತಾ ಚಿಂತಾಕ್ರಾಂತನಾಗಿರುವಾಗಲೇ ವಿದೂಷಕ ಬಂದು ಪದ್ಮಾವತಿ ಶೀರ್ಷವೇದನೆಯಿಂದ ದುಃಖಿತಳಾಗಿರುವುದನ್ನು ತಿಳಿಸುತ್ತಾನೆ. ಮೊದಲೇ ಪತ್ನೀವಿಯೋಗದಿಂದ ನಿರ್ವಿಣ್ಣನಾಗಿದ್ದವನು, ಆ ಗಾಯವೇ ಇನ್ನೂ ಮಾಸಿಲ್ಲದಿದ್ದರೂ ಪ್ರಿಯೆಯಾದ ಮತ್ತೊಬ್ಬಳನ್ನು ಮದುವೆಯಾಗಿ ಹಳೆಯ ಶೋಕ ಸ್ವಲ್ಪಮಟ್ಟಿಗೆ ಮಂದವಾಗಿತ್ತೊ ಎನ್ನುವಂತಿದ್ದಾಗ, ಈ ಸಮಾಚಾರ ಕೇಳಿ 'ಈ ಹೆಂಡತಿಯೂ ಹಾಗೆಯೇ

ಹೋಗಿಬಿಡುವಳೋ?' ಎಂದು ಹೆದರುತ್ತಾನೆ. ಮೊದಲನೆಯ ಹೆಂಡತಿ ವಾಸವದತ್ತೆ ಶ್ಲಾಘ್ಯೆ ಮತ್ತು ಅನುರೂಪೆಯಾಗಿದ್ದರೆ ಎರಡನೆಯ ಹೆಂಡತಿ ಪದ್ಮಾವತಿ ರೂಪಸಂಪತ್ತಿಯಿಂದಲೂ ಸುಗುಣಗಳಿಂದಲೂ ಕೂಡಿದವಳು. ಇವಳನ್ನೂ ಕಳೆದುಕೊಳ್ಳಬೇಕಾಗುವುದೋ ಎಂದು ಗಾಬರಿಯಾಗುತ್ತಾನೆ. ಸಮುದ್ರಗೃಹಕದಲ್ಲಿ (ಅವಳ) ಶಯ್ಯೆ ರಚಿತವಾಗಿದೆಯೆಂಬುದನ್ನರಿತು ವಿದೂಷಕನನ್ನು ಮುಂದಿಟ್ಟುಕೊಂಡು ನೆಟ್ಟಗೆ ಅಲ್ಲಿಗೇ ಹೋಗುತ್ತಾನೆ.

ಉದಯನ ಸಮುದ್ರಗೃಹ ತಲಪುವ ಹೊತ್ತಿಗೆ ಕತ್ತಲಾಗಿಬಿಟ್ಟಿರುತ್ತದೆ. ಒಳಗೆ ಸಣ್ಣ ದೀಪ ಮಾತ್ರ ಉರಿಯುತ್ತಿದೆ. ಆದರ ಬೆಳಕಿನಲ್ಲಿ ಬಾಗಿಲ ತೋರಣದ ಮಾಲೆ ಅಲ್ಲೇ ನೆಲದಮೇಲೆ ಬಿದ್ದು ಗಾಳಿಗೆ ಚಲಿಸುತ್ತಿರುವುದನ್ನು ವಿದೂಷಕ ಕಂಡು ಹಾವೆಂದು ಭ್ರಮಿಸುತ್ತಾನೆ, ಆದರೆ ರಾಜ ನಿಜಸ್ಥಿತಿಯನ್ನು ಅವನಿಗೆ ಅರಿವುಮಾಡಿಕೊಡಲು ಇಬ್ಬರೂ ಒಳಕ್ಕೆ ಹೋಗುತ್ತಾರೆ. ವಿದೂಷಕ ಸುತ್ತನೋಡಿ 'ಪದ್ಮಾವತಿ ಬಂದು ಹೊರಟುಹೋಗಿರಬೇಕು' ಎನ್ನುತ್ತಾನೆ. ಅದಕ್ಕೆ ರಾಜ ಹೇಳುತ್ತಾನೆ—'ಇಲ್ಲ; ಇನ್ನೂ ಬಂದೇ ಇರಲಿಕ್ಕಿಲ್ಲ; ನೋಡು ಹಾಸುಗೆ ಕೆಳಕ್ಕೆ ಕುಗ್ಗಿಲ್ಲ; ಹೇಗೆ ಹಾಸಿತ್ತೋ ಹಾಗೆ ಸಮನಾಗಿದೆ. ಮೇಲುಹೊದಿಕೆಯೂ ಕದಲಿಸಿಲ್ಲ. ತಲೆದಿಂಬು ಮುದುಡಿಹೋಗಿಲ್ಲ; ತಲೆನೋವಿಗೆ ಹಚ್ಚುವ ಔಷಧಗಳಿಂದ ಮಾಸದೆ ನಿರ್ಮಲವಾಗಿದೆ. ರೋಗದ ಅವಧಿಯಲ್ಲಿ ದೃಷ್ಟಿವಿಲೋಭನಕ್ಕಾಗಿ ಯಾವ ಅಲಂಕಾರವೂ ಮಾಡಲ್ಪಟ್ಟಿಲ್ಲ. ರೋಗದಿಂದ ಹಾಸುಗೆ ಹಿಡಿದವರು ಇಷ್ಟು ಬೇಗ ಹೊರಟು ಹೋಗುವುದೂ ಇಲ್ಲ.'

'ಹಾಗಾದರೆ ಸ್ವಲ್ಪ ಹೊತ್ತು ಇದೇ ಹಾಸುಗೆಯ ಮೇಲೆ ಕುಳಿತು ಅವಳ ಬರುವಿಕೆಯನ್ನು ಪ್ರತೀಕ್ಷಿಸು.'

'ಆಗಲಿ. (ಅಲ್ಲಿ ಕುಳಿತು) ಮಿತ್ರ, ನಿದ್ದೆ ಬರುತ್ತಿದೆ. ಯಾವುದಾದರೂ ಕಥೆ ಹೇಳಯ್ಯ.' ವಿದೂಷಕನು ಹೇಳುವ ಕಥೆ ಮತ್ತಿನ್ನೇನು? 'ಉಜ್ಜಯಿನಿ ಅಂತ ಒಂದು ಪಟ್ಟಣ. ಅಲ್ಲಿ ತುಂಬ ರಮಣೀಯವಾದ 'ಸ್ನಾನಘಟ್ಟ' ಗಳು......'ರಾಜನು 'ಉಜ್ಜಯಿನಿಯೇ?' ಎಂದು ದುಃಖ ಮರುಕಳಿಸಿದವನಾಗಿ, ವಾಸವದತ್ತೆ ಉಜ್ಜಯಿನಿಯಿಂದ ಹೊರಡುವಾಗ ಸ್ವಜನರನ್ನಗಲಲಾರದೆ ತನ್ನ ಎದೆಯ ಮೇಲೆಯೇ ಮುಖವಿಟ್ಟು ಕಣ್ಣೀರು ಹರಿಸಿದ ಕರುಣಪೂರ್ಣ ಸನ್ನಿವೇಶವನ್ನೂ, ತಾನು ಅವಳಿಗೆ ವೀಣೆಪಾಠ ಕಲಿಸುವಾಗ ವೀಣೆಯ ತಂತಿಯಮೇಲೆ ಗಮನವೇ ಇಲ್ಲದೆ ತನ್ನ ಮುಖವನ್ನೇ ನೋಡುತ್ತಾ ವೀಣೆ ನುಡಿಸುವಂತೆ ಸುಮ್ಮನೆ ಕೈಬೆರಳು ಆಡಿಸುತ್ತಿದ್ದುದನ್ನೂ ನೆನೆಯುತ್ತಾನೆ. ವಿದೂಷಕ ಬೇರೊಂದು ಕಥೆ ಹೇಳುತ್ತೇನೆಂದು 'ಬ್ರಹ್ಮದತ್ತ ಎಂಬ ಒಂದು ನಗರ, ಅಲ್ಲಿ ಕಾಂಪಿಲ್ಯನೆಂಬ ರಾಜ'

ಎಂದು ಆರಂಭಿಸುತ್ತಾನೆ. ರಾಜ ಅದನ್ನು 'ಕಾಂಪಿಲ್ಯ ಎಂಬ ನಗರ, ಅಲ್ಲಿ ಬ್ರಹ್ಮದತ್ತ ಎಂಬ ರಾಜ' ಎಂದು ತಿದ್ದುತ್ತಾನೆ. 'ಹಾಗೋ? ಸ್ವಲ್ಪ ಕಂಠಪಾಠ ಮಾಡಿಕೊಳ್ಳುತ್ತೇನೆ, ಸ್ವಲ್ಪ ಇರು' ಎಂದು ವಿದೂಷಕ ಅದನ್ನೇ ಪುನಃ ಪುನಃ ಹೇಳುತ್ತಿರುವಷ್ಟರಲ್ಲಿ ರಾಜ ಆ ಹಾಸುಗೆಯ ಮೇಲೆಯೇ ಮಲಗಿ ನಿದ್ದೆಹೋಗಿಬಿಡುತ್ತಾನೆ. ಸ್ವಲ್ಪ ಹೊತ್ತಾದಮೇಲೆ ವಿದೂಷಕ ಇದನ್ನು ಕಂಡು, ಅಲ್ಲಿ ತುಂಬ ಚಳಿಯಾಗಿದ್ದುದರಿಂದ, ತನಗಾಗಿ ಮೇಲುಹೊದಿಕೆಯೊಂದನ್ನು ತರಲು ತನ್ನ ಬಿಡಾರಕ್ಕೆ ಹೋಗುತ್ತಾನೆ.

ಆ ವೇಳೆಗೆ ಚೇಟಿಯೊಬ್ಬಳು ವಾಸವದತ್ತೆಯನ್ನು ಸಮುದ್ರಗೃಹದವರೆಗೆ ಕರೆತಂದು 'ನೀನು ಒಳಗೆ ಹೋಗು. ನಾನು ತಲೆಗೆ ಹಚ್ಚಲು ಮುಲಾಮನ್ನು ತರುತ್ತೇನೆ' ಎಂದು ಹೇಳಿ ಹೊರಟುಹೋಗುತ್ತಾಳೆ. ವಾಸವದತ್ತೆ ಒಳಕ್ಕೆ ಬಂದು ನೋಡುತ್ತಾಳೆ. ತೀರ ಮಂದಪ್ರಕಾಶದ ದೀಪವೊಂದಿದೆ. ಹಾಸುಗೆಯಮೇಲೆ ಬೇರೊಂದು ಕಡೆಗೆ ಮುಖಮಾಡಿ ಮಗ್ಗುಲಾಗಿ, ಮಂಚದಮೇಲೆ ಹಾಸಿದ ಹಾಸುಗೆಯ ಮೇಲೆ ಮಲಗಿ ನಿದ್ರಿಸುತ್ತಿರುವ (ವಾಸವದತ್ತೆಯ ನಿರೀಕ್ಷೆಯ ಪ್ರಕಾರ) ಪದ್ಮಾವತಿಯನ್ನು ಬಿಟ್ಟರೆ ಅಲ್ಲಿ ಬೇರೆ ಯಾರೂ ಇಲ್ಲವೇ ಇಲ್ಲ! ಪರಿಜನರದು ಎಂತಹ ಪ್ರಮಾದ! ಸ್ವಸ್ಥವಿಲ್ಲದ ಪದ್ಮಾವತಿಯೊಬ್ಬಳನ್ನೇ ಬಿಟ್ಟು ಎಲ್ಲರೂ ಎಲ್ಲೋ ಹೊರಟುಹೋಗಿದ್ದಾರಲ್ಲ! ಎಂದು, ಬೇರೆಲ್ಲಾದರೂ ಕುಳಿತುಕೊಂಡರೆ 'ಇವಳ ಸ್ನೇಹ ಇಷ್ಟೇನೆ' ಎಂದುಕೊಂಡಾಳು ಪದ್ಮಾವತಿ ಎಂದು, ಅದೇ ಹಾಸುಗೆಯ ಮೇಲೆ ಕುಳಿತುಕೊಳ್ಳುತ್ತಾಳೆ. ಕುಳಿತುಕೊಂಡೊಡನೆ ಅವಳ ಮನಸ್ಸಿಗೆ ಏನೋ ಒಂದು ಬಗೆಯ ಆಹ್ಲಾದವಾಗುತ್ತದೆ. 'ಇದೇಕೆ ಇಂದು ಹೀಗಾಗುತ್ತಿದೆ?' ಅಂದುಕೊಳ್ಳುತ್ತಾಳೆ. ಹಾಸುಗೆಯ ಒಂದು ಪಕ್ಕಕ್ಕೆ ಅವಳು ಮಲಗಿ ಒಂದು ಅರ್ಧ ಹಾಸುಗೆ ಬರಿದಾಗಿ ಬಿಟ್ಟದ್ದುದು ತಾನೂ ಅಲ್ಲಿ ಪಕ್ಕದಲ್ಲೇ ಮಲಗಿಕೊಳ್ಳಲೆಂದೇ ಇರಬಹುದೆಂದುಕೊಂಡು ವಾಸವದತ್ತೆ ಅಲ್ಲೇ ಮಲಗಿಕೊಳ್ಳುತ್ತಾಳೆ.

ಇಲ್ಲಿ ನಾವು ಗಮನಿಸಬೇಕಾದುದು ಎಷ್ಟು ಸಹಜ ರೀತಿಯಲ್ಲಿ, ಕೃತಕತೆಯ ಸೋಂಕೂ ಇಲ್ಲದಂತೆ ಭಾಸ ಕಥಾವಸ್ತುವನ್ನು ಬೆಳೆಸಿಕೊಂಡು ಹೋಗುತ್ತಿರುವನೆಂಬುದನ್ನು. ಅಲ್ಲಿ ಮಲಗಿರುವವನ ಮುಖ ಬೇರೆ ಕಡೆಗಿದ್ದು ಮಂದವಾದ ಆ ದೀಪ ಪ್ರಕಾಶದಲ್ಲಿ ವಾಸವದತ್ತೆಗೆ ತನ್ನ ನಿರೀಕ್ಷೆಗೆ ವಿರುದ್ಧವಾಗಿ ಅಲ್ಲಿ ಉದಯನ ಮಲಗಿರುವುದು ಗೋಚರವಾಗದಿದ್ದುದರಲ್ಲಿ ಆಶ್ಚರ್ಯವಾಗಲೀ ಅಸಹಜತೆಯಾಗಲೀ ಇಲ್ಲ. ಅವಳ ನಿರೀಕ್ಷೆ ಅಷ್ಟು ಖಚಿತ

28

ವಾಗಿತ್ತು. ಸಾಲದುದಕ್ಕೆ ಆಗ ಚಳಿಯಾಗಿತ್ತೆಂದು ವಿದೂಷಕನ ಬಾಯಲ್ಲಿ ಹೇಳಿಸಿ ಉದಯನ ವೈತುಂಬ ಹೊದೆದುಕೊಂಡು ಮಲಗಿದ್ದನೆಂಬುದನ್ನು ಭಾಸ ಪರ್ಯಾಯವಾಗಿ ಸೂಚಿಸಿದ್ದಾನೆ. ಪದ್ಮಾವತಿಯೊಡನೆ ವಾಸವದತ್ತೆಯ ಸ್ನೇಹ ಗಾಢವಾಗಿದ್ದುದರಿಂದಲೇ ವಾಸವದತ್ತೆ ಮೊದಲು ಅವಳ ಹಾಸುಗೆಯ ಮೇಲೆಯೇ ಕುಳಿತು ಬಳಿಕ ಅಲ್ಲೇ ಮಲಗಿಕೊಂಡದ್ದು.

ರಾಜನು ಕನವರಿಸಲಾರಂಭಿಸುತ್ತಾನೆ. ಅವನ ಮಾತು, ಧ್ವನಿ ವಾಸವದತ್ತೆಯ ಕಿವಿಯಮೇಲೆ ಬಿದ್ದೊಡನೆ ಅವಳು ಗಾಬರಿಯಿಂದ ಮೇಲಕ್ಕೇಳುತ್ತಾಳೆ. 'ಇದು ಆರ್ಯಪುತ್ರ! ಪದ್ಮಾವತಿಯಲ್ಲ!' ಎಂದು ವಾಸ್ತವಾಂಶ ಅರಿತವಳಾಗಿ 'ಅವನೆಲ್ಲಿ ತನ್ನನ್ನು ನೋಡಿಬಿಟ್ಟನೋ? ಯೌಗಂಧರಾಯಣನ ಮಹಾಪ್ರಯತ್ನವೆಲ್ಲ ಎಲ್ಲಿ ನಿಷ್ಫಲವಾಗಿಬಿಟ್ಟಿತೋ? ಎಂದು ಕಳವಳಗೊಳ್ಳುತ್ತಾಳೆ. ರಾಜ ಪುನಃ ಕನವರಿಸುತ್ತಾನೆ—'ಹಾ! ಅವಂತಿರಾಜಪುತ್ರಿ!' ಕನಸಿನಲ್ಲೂ, ನನಸಿನಲ್ಲೂ ಅವನಿಗೆ ವಾಸವದತ್ತೆಯದೇ ಧ್ಯಾನ! ರಾಜನು ಕನವರಿಸುತ್ತಿರುವುದು ಈಗ ವಾಸವದತ್ತೆಗೆ ಅರಿವಾಗುತ್ತದೆ. ಆ ಪ್ರದೇಶವೂ ಆಗ ನಿರ್ಜನವಾಗಿತ್ತು. ತನ್ನ ಪ್ರಿಯನನ್ನು ಸಮೀಪದಲ್ಲಿ ನೋಡಬಹುದಾದ ಅವಕಾಶ ಲಭ್ಯವಾಗಿತ್ತು. 'ಸ್ವಲ್ಪ ಕಾಲ ನೋಡಿ ದೃಷ್ಟಿಯನ್ನೂ ಹೃದಯವನ್ನೂ ತಣಿಸಿಕೊಳ್ಳುತ್ತೇನೆ' ಎಂದು ಅವನು ಮುಖ ಮಾಡಿಕೊಂಡಿದ್ದ ಕಡೆಗೆ ಹೋಗಿ ಅವನನ್ನೇ ನೋಡುತ್ತಾ ನಿಂತುಕೊಳ್ಳುತ್ತಾಳೆ. ಅವನು ಪುನಃ ಕನವರಿಸುತ್ತಾ ಹೇಳುತ್ತಾನೆ—

'ಹಾ ಪ್ರಿಯೆ! ಹಾ ಪ್ರಿಯಶಿಷ್ಯೆ! ಮಾತಾಡು.'

'ಮಾತಾಡುತ್ತಿದ್ದೇನಲ್ಲ, ಸ್ವಾಮಿ'

'ಕೋಪಗೊಂಡಿದ್ದೀಯೇನು?'

'ಇಲ್ಲ, ಇಲ್ಲ; ದುಃಖಿತಳಾಗಿದ್ದೇನೆ.'

'ಕೋಪವಿಲ್ಲದಿದ್ದರೆ ಅದೇಕೆ ಅಲಂಕಾರಮಾಡಿಕೊಂಡಿಲ್ಲ?'

'ಇದಕ್ಕಿಂತ ಇನ್ನೇನು?'

'ವಿರಚಿಕೆಯ ನೆನಪಾಯಿತೇನು?'

'ಛಿ! ಇಲ್ಲೂ ವಿರಚಿಕೆಯೆ?' (ಈ ವಿರಚಿಕೆ ಒಬ್ಬ ಚೇಟಿ. ಅವಳೊಡನೆ ಉದಯನನೊಂದುದಿನ ಸರಸವಾಡುತ್ತಿದ್ದುದನ್ನು ವಾಸವದತ್ತೆ ಕಣ್ಣಾರ ಕಂಡು ಅವನಮೇಲೆ ಕುಪಿತಳಾಗಿದ್ದಳು.) ವಾಸವದತ್ತೆ ಈಗಾಗಲೇ ಅಲ್ಲಿ ಬಹಳ ಹೊತ್ತು ನಿಂತುಬಿಟ್ಟಿದ್ದಳು. ಯಾರಾದರೂ ನೋಡಿದರೆ ಹೇಗೆ? ಎಂದು ಒಲ್ಲದ ಮನಸ್ಸಿನಿಂದ ಹೊರಹೊರಡಲು ನಿಶ್ಚಯಿಸುತ್ತಾಳೆ. ಅಷ್ಟರಲ್ಲಿ ಮಂಚ

ದಿಂದ ಕೆಳಕ್ಕೆ ರಾಜನ ತೋಳು ಇಳಿಬಿದ್ದಿದ್ದುದರಿಂದ ಅದನ್ನು ಮೇಲಕ್ಕೆತ್ತಿಟ್ಟು ಹೋಗೋಣವೆಂದುಕೊಳ್ಳುತ್ತಾಳೆ. ಪಕ್ಕದಲ್ಲೇ ಮಲಗಿದ್ದರೂ ಅವನನ್ನು ಮುಟ್ಟಿರಲಿಲ್ಲ. ನಿರ್ಬಾಧವಾದ ಅವಕಾಶ ದೊರೆತಿರುವಾಗ ಪತಿಯ ಹಸ್ತ ಸ್ಪರ್ಶಸುಖವನ್ನು ಅದೇಕೆ ಪಡೆಯಬಾರದು? ಅವನ ತೋಳನ್ನು ತನ್ನ ಕೈಯಾರ ಮುಟ್ಟಿ ಮೇಲಕ್ಕೆತ್ತಿಟ್ಟು ಹೊರಟುಹೋಗುತ್ತಾಳೆ. ಅದರಿಂದ ಅವಳ ಮನಸ್ಸಿಗೆ ಎಷ್ಟರಮಟ್ಟಿನ ಸಂತೋಷವಾಗಿತ್ತೋ ಅದು ಊಹಿಸಲು ಮಾತ್ರ ಸಾಧ್ಯ. ರಾಜನಂತು ಪ್ರಿಯೆಯ ಹಸ್ತಸ್ಪರ್ಶದಿಂದ ರೋಮಾಂಚಗೊಂಡು ಮೇಲಕ್ಕೇಳುತ್ತಾನೆ. ವಾಸವದತ್ತೆ ಹೊರಟುಹೋಗುತ್ತಿರುವುದನ್ನು ಕಣ್ಣಾರ ಕಂಡು (ಅವಳ ಮುಖ ಬಾಗಿಲಕಡೆಗೆ ಇದ್ದುದರಿಂದ ಅದನ್ನು ಅವನು ನೋಡಿರಲಾರ) 'ನಿಲ್ಲು ನಿಲ್ಲು ವಾಸವದತ್ತೆ' ಎಂದು ಕೂಗಿಕೊಳ್ಳುತ್ತಾ ಬಾಗಿಲ ಕಡೆಗೆ ಧಾವಿಸುತ್ತಾನೆ. ನಿದ್ದೆಗಣ್ಣಿನ ಮಬ್ಬಿನಲ್ಲಿ ಹೋಗುತ್ತಿದ್ದ ಅವನ ಮುಖಕ್ಕೆ ಬಾಗಿಲ ಕದ ಬಡಿಯುತ್ತದೆ. ರಾಜ ನಿರಾಶನಾಗುತ್ತಾನೆ.

ಅದೇ ವೇಳೆಗೆ ಸರಿಯಾಗಿ ವಿದೂಷಕ ಹಿಂದಿರುಗಿ ಬರುತ್ತಾನೆ. ರಾಜನು ಅವನಿಗೆ ವಾಸವದತ್ತೆ ಬದುಕಿದ್ದಾಳೆಂದು ತಿಳಿಸುತ್ತಾನೆ. ಅದಕ್ಕವನು 'ಎಲ್ಲಿಯ ವಾಸವದತ್ತೆ? ಅವಳೆಂದೋ ಸತ್ತುಹೋದಳು!' ಎಂದು ಪೇಲವವಾಗಿ ನಿರಾಕರಿಸುತ್ತಾನೆ. ಆಗ ರಾಜನು ತಾನು ಮಲಗಿದ್ದಾಗ ಅವಳೇ ಬಂದು ತನ್ನನ್ನೆಬ್ಬಿಸಿ ಹೊರಟುಹೋದಳೆನ್ನುತ್ತಾನೆ. ವಿದೂಷಕ ನಂಬುವುದಿಲ್ಲ. ಹೇಳುತ್ತಾನೆ— 'ಇದು ಅಸಂಭಾವ್ಯ. ಸ್ನಾನಘಟ್ಟಗಳ ವಿಚಾರ ಕೇಳಿಬಿಟ್ಟು ಅದನ್ನೇ ಯೋಚಿಸುತ್ತಾ ಮಲಗಿದ್ದಾಗ ನೀನು ಅವಳನ್ನು ಸ್ವಪ್ನದಲ್ಲಿ ಕಂಡಿರಬೇಕು.' ರಾಜನಿಗೂ ಹಾಗೆಯೇ ಇರಬಹುದೋ ಎನಿಸುತ್ತದೆ. ವಿದೂಷಕ ತಿರುಗಿ ಹೇಳುತ್ತಾನೆ—

'ವಯಸ್ಯ, ಈ ಊರಲ್ಲಿ ಅವಂತಿಸುಂದರಿ ಎಂಬ ಯಕ್ಷಿಣಿಯಿದ್ದಾಳೆ. ಅವಳನ್ನು ನೀನು ಕಂಡಿರಬೇಕು.'

'ಇಲ್ಲವಯ್ಯಾ. ಸ್ವಪ್ನದ ಕೊನೆಯಲ್ಲಿ ಎಚ್ಚೆತ್ತಾಗ ತನ್ನ ಚಾರಿತ್ರವನ್ನು ಕಾಪಾಡಿಕೊಂಡು ಕಣ್ಣಿಗೆ ಕಾಡಿಗೆಯನ್ನೂ ಹಚ್ಚದಿದ್ದ ಉದ್ದವಾದ ಮುಂಗುರುಳುಗಳುಳ್ಳ ಅವಳ ಮುಖವನ್ನು ಕಣ್ಣಾರ ಕಂಡೆ. ಅಲ್ಲದೆ ಅವಳು ನನ್ನ ಈ ತೋಳನ್ನು ಮುಟ್ಟಿ ಎತ್ತಿ ಮಂಚದಮೇಲಿಟ್ಟದ್ದು ಸ್ವಪ್ನದಲ್ಲೇ ಆಗಿದ್ದರೂ ಇನ್ನೂ ರೋಮಾಂಚ ನಿಂತಿಲ್ಲ.' ಅದಕ್ಕೆ ವಿದೂಷಕ, ಇದೆಲ್ಲ ಅನರ್ಥಕಾರಿ ಚಿಂತೆ. ಅರಮನೆಯೊಳಕ್ಕೆ ಹೋಗೋಣ ಬಾ, ಎಂದು ಅವನನ್ನು ಕರೆಯುತ್ತಾನೆ. ಅಷ್ಟರಲ್ಲಿ ಕಾಂಚುಕೀಯನೊಬ್ಬ ಬಂದು ವತ್ಸರಾಜನ ಅಮಾತ್ಯ ರುಮಣ್ವಂತನು ದೊಡ್ಡ ಸೇನಾ

ಸಮೂಹದಿಂದ ಕೂಡಿ ಆರುಣಿಯನ್ನೆದುರಿಸಲು ಬಂದಿರುವುದಾಗಿಯೂ ದರ್ಶಕನ ಸೈನ್ಯವೂ ಸಿದ್ಧವಾಗಿರುವುದಾಗಿಯೂ ವತ್ಸರಾಜನು ಮುಂದಿನ ಏರ್ಪಾಟನ್ನು ಗಮನಿಸಬೇಕೆಂದೂ ತಿಳಿಸುತ್ತಾನೆ. ವಿದೂಷಕನೊಡನೆ ರಾಜನು ಕೂಡಲೇ ಅರಮನೆಗೆ ತೆರಳುತ್ತಾನೆ. ಇಲ್ಲಿಗೆ ಐದನೆಯ ಅಂಕ ಮುಗಿಯುತ್ತದೆ.

ಆರುಣಿಯನ್ನು ಜಯಿಸಲು ಬೇಕಾದ ಸಹಾಯಸಂಪತ್ತಿ ಒದಗಿದೆಯೆಂದು ಹೇಳಿರುವುದರಿಂದ ನಷ್ಟವಾಗಿದ್ದ ರಾಜ್ಯ ಪುನಃ ಲಭಿಸಿದಂತೆಯೇ. ಯೌಗಂಧರಾಯಣನ ಉದ್ದೇಶವೂ ಈಡೇರಿದಂತೆಯೇ. ಅಂದರೆ ವಾಸವದತ್ತೆಯೂ ಪುನಃ ವತ್ಸರಾಜನನ್ನು ಸೇರಿಕೊಳ್ಳುವ ಸಮಯ ಸಮೀಪಿಸಿದಂತೆಯೇ— ಎಂದೂ ಸೂಚಿತವಾದಂತಾಯಿತು. ಕಥಾವಸ್ತುವಿನ ಸ್ವಾರಸ್ಯ ರಮಣೀಯತೆ ಈ ರೀತಿಯಲ್ಲಿ ಪರಾಕಾಷ್ಠೆಯನ್ನು ತಲುಪಿ ಮುಂದಿನ ಅಂಕದಲ್ಲಿ ಪರಿಸಮಾಪ್ತಿಗೊಳ್ಳುತ್ತದೆ.

* * *

ಆರನೆಯ ಅಂಕದಲ್ಲಿ ಎದ್ದು ಕಾಣಿಸುವುದು ಭಾಸನ ಸಂವಿಧಾನ ಕೌಶಲ, ಕಥೆಯ ಉಪಸಂಹಾರ ಮಾಡುವುದರಲ್ಲೂ ಅವನು ಮೂಡಿಸಿರುವ ಅಕೃತ್ರಿಮ ರಮಣೀಯತೆ. ವತ್ಸರಾಜ ಉದಯನನು ಕಳೆದುಕೊಂಡಿದ್ದ ರಾಜ್ಯವನ್ನು ಪುನಃ ಜಯಿಸಿ ಸುಪ್ರತಿಷ್ಠಿತನಾದುದನ್ನು ಕೇಳಿ ಮಹಾಸೇನನೂ ರಾಣಿ ಅಂಗಾರವತಿಯೂ ತಮ್ಮ ಅಭಿನಂದನಾ ಸಂದೇಶಗಳನ್ನು ಒಬ್ಬ ಕಾಂಚುಕೀಯ ಮತ್ತು ವಾಸವದತ್ತೆಯ ಧಾತ್ರಿಯ ಮೂಲಕ ಕಳುಹಿಸಿಕೊಡುತ್ತಾರೆ. ಅವರು ಕೌಶಾಂಬಿಗೆ ಬರುವಷ್ಟರಲ್ಲಿ, ವಾಸವದತ್ತೆಯೊಡನೆಯೇ ನಷ್ಟವಾಗಿಹೋಗಿದ್ದ ಅವಳ ಘೋಷವತಿ ವೀಣೆ ವತ್ಸರಾಜನಿಗೆ ಯಾದೃಚ್ಛಿಕವಾಗಿ ಸಿಕ್ಕಿ ಅದನ್ನು ತೊಡೆಯಮೇಲಿಟ್ಟುಕೊಂಡು 'ಘೋಷವತಿ, ನೀನೇನೋ ಸಿಕ್ಕಿದೆ. ಅವಳನ್ನು ಕಾಣೆನಲ್ಲ!' ಎಂದು ಪರಿತಪಿಸುತ್ತಿರುತ್ತಾನೆ. ವಿದೂಷಕನು ಅವನನ್ನು ಸಂತೈಸಲು ವೃಥಾ ಯತ್ನಿಸುತ್ತಾನೆ. 'ಚಿರಪ್ರಸುಪ್ತವಾಗಿದ್ದ ನನ್ನ ಕಾಮ ಈಗ ವೀಣೆಯಿಂದ ಎಚ್ಚರಗೊಳಿಸಲ್ಪಟ್ಟಿದೆ. ಆದರೆ ಯಾರಿಗೆ ಈ ಘೋಷವತಿ ಪ್ರಿಯವಾಗಿತ್ತೋ ಆ ದೇವಿಯನ್ನು ಮಾತ್ರ ಕಾಣೆ' ಎಂದು ರಾಜ ನಿರ್ವಿಣ್ಣನಾಗಿ ವಿದೂಷಕನ ಕೈಯಲ್ಲಿ ಆ ವೀಣೆಯನ್ನು ಕೊಟ್ಟು 'ಶಿಲ್ಪಿಗಳಿಂದ ಇದನ್ನು ಸರಿಮಾಡಿಸಿ ಬೇಗ ತೆಗೆದುಕೊಂಡುಬಾ' ಎಂದು ಹೇಳಿಕಳುಹಿಸಿಬಿಡುತ್ತಾನೆ. ಮಹಾಸೇನನ ಕಡೆಯಿಂದ ಬಂದಿದ್ದ ರೈಭ್ಯನೆಂಬ ಕಾಂಚುಕೀಯನೂ ವಸುಂಧರೆ ಎಂಬ ಧಾತ್ರಿಯೂ ರಾಜನನ್ನು ಕಾಣಲು ಬರುತ್ತಾರೆ. ಅವರನ್ನು ಕಾಣುವಾಗ ಪದ್ಮಾವತಿಯೂ ತನ್ನ

ಜತೆಯಲ್ಲೇ ಇರಬೇಕೆಂದು ವತ್ಸರಾಜ ಅವಳನ್ನೂ ಅಲ್ಲಿಗೇ ಕರೆಸಿಕೊಳ್ಳುತ್ತಾನೆ. 'ಆರ್ಯಪುತ್ರನ ಎರಡನೆ ಹೆಂಡತಿ' ಎಂದು ತನ್ನ ಬಗೆಗೆ ಮಹಾಸೇನನ ಪ್ರತಿನಿಧಿಗಳು ಉದಾಸೀನರಾಗಿದ್ದರೆ ಹೇಗೆ ಎಂದು ಪದ್ಮಾವತಿ ಮೊದಲು ಹಿಂದೆಗೆದರೂ, 'ಪತ್ನಿಯನ್ನು ನೋಡಬಹುದಾದವರಿಗೂ ಅವಳನ್ನು ನೋಡಲವಕಾಶ ಕೊಡುತ್ತಿಲ್ಲ ಎಂದು ಬಹುದೋಷಕ್ಕೆ ಕಾರಣವಾಗುತ್ತದೆ' ಎಂದು ರಾಜನು ಹೇಳಲು, ಅವಳೂ ಅವನ ಜತೆಯಲ್ಲೇ ಇರುತ್ತಾಳೆ. 'ಕನ್ಯೆಯನ್ನು ನಾನೇನೋ ಅಪಹರಿಸಿಬಿಟ್ಟೆ, ಆದರೆ ಅವಳನ್ನು ರಕ್ಷಿಸಲಿಲ್ಲ. ಭಾಗ್ಯದ ಅಸ್ಥಿರತೆಯ ಕಾರಣದಿಂದ ನನ್ನ ಗುಣಗಳಿಗೆಲ್ಲ ಆಘಾತವುಂಟಾಗಿ, ತಂದೆಗೆ ಕೋಪವುಂಟುಮಾಡಿದ ಮಗನಂತೆ, ಇವರು ಏನು ಹೇಳುತ್ತಾರೋ ಎಂದು ಭೀತನಾಗಿದ್ದೇನೆ.' ಎಂದು ರಾಜನು ತನ್ನ ತವಕವನ್ನು ಪದ್ಮಾವತಿಯ ಮುಂದೆ ತೋಡಿಕೊಳ್ಳುತ್ತಾನೆ. ಆದಕ್ಕವಳು 'ಕಾಲ ಬಂದುಬಿಟ್ಟಾಗ ಯಾವುದನ್ನು ತಾನೆ ರಕ್ಷಿಸಲು ಸಾಧ್ಯ?' ಎಂದು ಸಮಾಧಾನ ಹೇಳುತ್ತಾಳೆ.

ಕಾಂಚುಕೀಯ ಧಾತ್ರಿ ಇಬ್ಬರೂ ರಾಜನ ಸಮೀಪಕ್ಕೆ ಕರೆತರಲ್ಪಟ್ಟು ಕುಶಲ ಸಂಭಾಷಣೆಯಾದಮೇಲೆ ಮಹಾಸೇನನ ಸಂದೇಶವನ್ನು ಕಾಂಚುಕೀಯ ತಿಳಿಸುತ್ತಾನೆ—'ಶತ್ರುಗಳಿಂದ ಅಪಹೃತವಾಗಿದ್ದ ರಾಜ್ಯ ಪುನಃ ಸ್ವವಶವಾದುದು ಸಂತೋಷ. ಹೇಡಿಗಳಿಗೂ ಅಶಕ್ತರಿಗೂ ಉತ್ಸಾಹವಿರುವುದಿಲ್ಲ. ರಾಜಲಕ್ಷ್ಮಿ ಪ್ರಾಯಃ ಉತ್ಸಾಹಿಗಳಿಂದಲೇ ಅನುಭವಿಸಲ್ಪಡುವುದು' ಎಂದು. ಅಂಗಾರವತಿಯು ಉದಯನನ ಕುಶಲ ಕೇಳಿದಳೆಂದು ವಸುಂಧರೆ ಹೇಳುತ್ತಾಳೆ. ಆದಕ್ಕೆ, ಷೋಡಶಾಂತಃಪುರಜ್ಯೇಷ್ಠೆಯೂ, ಉಜ್ಜಯಿನಿಯ ಪುಣ್ಯಮಯಿ ದೇವತೆಯೂ, ತನ್ನ ಪ್ರವಾಸದಿಂದ ದುಃಖಾರ್ತಳಾಗುತ್ತಿದ್ದವಳೂ ಆದ ಅಂಗಾರವತಿಯ ಮೇಲೆ ಅಪಾರ ಗೌರವವಿಟ್ಟಿದ್ದ ವತ್ಸರಾಜ—'ಕುಶಲವೇ? ತಾಯಿ, ಈ ಬಗೆಯಲ್ಲಿ ಕುಶಲ!' ಎನ್ನುತ್ತಾನೆ. ಕಾಂಚುಕೀಯ 'ಮೃತ್ಯುಕಾಲದಲ್ಲಿ ಯಾರು ಯಾರನ್ನು ರಕ್ಷಿಸಲು ಸಾಧ್ಯ? ಹಗ್ಗ ಕಿತ್ತುಹೋದರೆ ಗಡಿಗೆಯನ್ನು ಯಾರು ಹಿಡಿದುಕೊಳ್ಳುವುದಕ್ಕಾಗುತ್ತದೆ' ಎಂದು ಸಮಾಧಾನ ಹೇಳುತ್ತಾನೆ. ವಸುಂಧರೆ ರಾಣಿ ಅಂಗಾರವತಿಯ ಸಂದೇಶ ತಿಳಿಸುತ್ತಾಳೆ—'ವಾಸವದತ್ತೆಯಂತು ಸತ್ತುಹೋದಳು. ಮೊದಲಿನಿಂದ ನೀನೂ ನಮ್ಮ ಮಕ್ಕಳಂತೆಯೇ. ಏನೋ ಚಪಲತೆಯಿಂದ ಮದುವೆಯಾಗುವುದಕ್ಕೆ ಮುಂಚೆಯೇ ಹೊರಟುಹೋದೆ. ನಾವಂತು ನಿಮ್ಮಿಬ್ಬರ ಚಿತ್ರಪಠಗಳನ್ನಿಟ್ಟೇ ವಿವಾಹೋತ್ಸವ ನಡೆಸಿಬಿಟ್ಟೆವು. ಇದೋ ಆ ಚಿತ್ರಗಳು. ಇವುಗಳನ್ನು ನೋಡಿ ಸ್ವಲ್ಪಮಟ್ಟಿಗಾದರೂ ಸಂತೈಸಿಕೊ.' ಈ ಸಂದೇಶ ಕೇಳಿ ರಾಜನಿಗೆ ನೂರು ರಾಜ್ಯ ಲಾಭವಾದುದಕ್ಕಿಂತ ಹೆಚ್ಚು ಪ್ರಿಯವೆನಿಸುತ್ತದೆ. ಸಹಜವಾಗಿಯೇ ಪದ್ಮಾ

ವತಿಗೆ ಆ ಚಿತ್ರಗಳನ್ನು ನೋಡಬೇಕೆನಿಸುತ್ತದೆ. ನೋಡುತ್ತಾಳೆ. ವಾಸವದತ್ತೆಯ ಚಿತ್ರಕ್ಕೂ ತನ್ನ ಸಖಿ ಆವಂತಿಕೆಗೂ ಇರುವ ಹೋಲಿಕೆಯನ್ನು ಕಂಡು ಬೆರಗಾಗಿ ರಾಜನ ಚಿತ್ರವನ್ನು ಪರಿಶೀಲಿಸುತ್ತಾಳೆ. ಅದೂ ರಾಜನಂತೆಯೇ ಇದ್ದುದರಿಂದ ವಾಸವದತ್ತೆಯ ಚಿತ್ರವೂ ಅವಳನ್ನೇ ಪ್ರತಿಬಿಂಬಿಸುತ್ತದೆಯೆಂದು ನಿಶ್ಚಯಿಸಿಕೊಂಡು ರಾಜನಿಗೆ ಹೇಳುತ್ತಾಳೆ—'ಆರ್ಯಪುತ್ರ, ಈ ಪ್ರತಿಕೃತಿಯನ್ನು ಹೋಲುವವಳು ಇಲ್ಲೇ ಇದ್ದಾಳೆ.' ರಾಜನಿಗೆ ಅವಳನ್ನು ನೋಡುವ ಕುತೂಹಲ ವುಂಟಾಗಲು, ಆವಂತಿಕೆಯನ್ನು ಬ್ರಾಹ್ಮಣನೊಬ್ಬನು ತನ್ನಲ್ಲಿ ನಿಕ್ಷೇಪವಾಗಿಟ್ಟ ವಿವರಗಳನ್ನು ತಿಳಿಸುತ್ತಾಳೆ. ಅದಕ್ಕೆ ಸರಿಯಾಗಿ ಅದೇ ಬ್ರಾಹ್ಮಣ (ಅವನೇ ಯೌಗಂಧರಾಯಣ) ಅಲ್ಲಿಗೆ ಬಂದು ತನ್ನ ತಂಗಿಯನ್ನು ಪದ್ಮಾವತಿಯಿಂದ ಹಿಂದೆಗೆದುಕೊಳ್ಳಲು ಬಂದಿರುವುದಾಗಿ ಹೇಳುತ್ತಾನೆ. ಅವನ ಧ್ವನಿ ವತ್ಸ ರಾಜನಿಗೆ ಪರಿಚಿತವೆಂಬಂತೆ ಭಾಸವಾಗುತ್ತದೆ. ಪದ್ಮಾವತಿ ಆವಂತಿಕೆಯನ್ನು ಅಲ್ಲಿಗೆ ಕರೆತರುತ್ತಾಳೆ. ರೈಭ್ಯನನ್ನೂ ವಸುಂಧರೆಯನ್ನೂ ಸಾಕ್ಷಿಗಳನ್ನಾಗಿಟ್ಟು ಕೊಂಡು ನ್ಯಾಸವನ್ನು ಹಿಂದಿರುಗಿಸುವಂತೆ ಪದ್ಮಾವತಿಗೆ ವತ್ಸರಾಜ ಹೇಳು ತ್ತಾನೆ. ವಸುಂಧರೆ ವಾಸವದತ್ತೆಯ ಗುರುತು ಹಿಡಿಯುತ್ತಾಳೆ. ಯೌಗಂಧ ರಾಯಣನೂ ತನ್ನ ನಿಜರೂಪದಿಂದ ವತ್ಸರಾಜನ ಜಯಕಾರಮಾಡುತ್ತಾನೆ. ರಾಜನಿಗೆ ಪರಮಾಶ್ಚರ್ಯ! ತನ್ನ ಕಣ್ಣನ್ನು ತಾನೇ ನಂಬಲಾರ. 'ಅವಳು ಪುನಃ ನನಗೆ ಕಾಣಿಸುವುದೆಂದರೆ ಇದೇನು ಸತ್ಯವೋ, ಸ್ವಪ್ನವೊ? ಹೀಗೆಯೇ ಹಿಂದೊಂದು ಸಲ ಇವಳನ್ನು ಕಂಡು ವಂಚಿತನಾಗಿದ್ದೇನೆ,' ಎಂದುಕೊಳ್ಳುತ್ತಾನೆ. ದೇವಿ ವಾಸವ ದತ್ತೆಯನ್ನು ರಾಜನಿಂದ ಅಗಲಿಸಿಟ್ಟಿದ್ದುದಕ್ಕಾಗಿ ಅವನ ಕ್ಷಮೆಯನ್ನು ಯೌಗಂಧರಾಯಣ ಬೇಡುತ್ತಾನೆ. ಪದ್ಮಾವತಿ ತಿಳಿಯದೆ ವಾಸವದತ್ತೆಯನ್ನು ಸಖಿಯಂತೆ ಕಂಡುದಕ್ಕಾಗಿ ಅವಳಿಗೆ ತಲೆಬಾಗಿ ಮನ್ನಿಸಬೇಕೆನ್ನುತ್ತಾಳೆ.

ಎಲ್ಲರ ಮನಃಸ್ಥಿತಿಯನ್ನೂ ಭಾಸ ಇಲ್ಲಿ ಸೂಚಿಸಿದ್ದರೂ ವಾಸವದತ್ತೆಯ ವಿಚಾರವನ್ನೇನೂ ಇಲ್ಲಿ ಹೇಳಿಲ್ಲ; ಎಂದಿನಂತೆ ನಮ್ಮ ಊಹೆಗೇ ಬಿಟ್ಟುಬಿಟ್ಟಿ ದ್ದಾನೆ. ಅವಳ ಸಂತೋಷ ಅಷ್ಟು ಅನಿರ್ವಚನೀಯ, ಅನುಭವೈಕವೇದ್ಯ. ವಾಸವದತ್ತೆಯ ಕುಶಲವನ್ನು ಮಹಾಸೇನ-ಅಂಗಾರವತಿಯರಿಗೆ ನಿವೇದಿಸಲು ಎಲ್ಲರೂ, ಪದ್ಮಾವತಿಯನ್ನೂ ಜತೆಯಲ್ಲಿ ಕರೆದುಕೊಂಡು, ಉಜ್ಜಯಿನಿಗೆ ತೆರಳುವುದೆಂಬ ತೀರ್ಮಾನದೊಡನೆ ಈ ನಾಟಕ, ಸ್ವಪ್ನದಲ್ಲಿ ಕಂಡ ರಮಣೀಯ ವಾದ ಅನುಭವದಂತೆ, ಪರಿಸಮಾಪ್ತವಾಗುತ್ತದೆ.

* * *

ಸಂವಿಧಾನ ಕೌಶಲದಲ್ಲಿ ಹೇಗೋ ಹಾಗೆ ಪಾತ್ರರಚನೆಯಲ್ಲೂ ಭಾಸನದು ಪಳಗಿದ ಕೈ. ಅವನ ಪಾತ್ರಗಳಲ್ಲಿ ಕೃತಕತೆ ಸ್ವಲ್ಪವೂ ಇಲ್ಲ. ಎಲ್ಲರೂ ಜೀವಂತ ವ್ಯಕ್ತಿಗಳು. ಒಬ್ಬೊಬ್ಬರ ಹೃದಯಾಂತರಾಳದ ಒಳತೋಟಿಯನ್ನೂ ಪ್ರವೇಶಿಸಿ ಅಲ್ಲಿ ನಡೆಯುವುದೆಲ್ಲವನ್ನೂ ಪ್ರೇಕ್ಷಕರ ಕಣ್ಣಮುಂದೆ ಕಟ್ಟಿದಂತೆ ಕೆಲವೇ ಮಾತುಗಳಲ್ಲಿ ಚಿತ್ರಿಸುವ ಅಸಾಧಾರಣ ಶಕ್ತಿ ಭಾಸನಲ್ಲಿ ಮೈಗೂಡಿಕೊಂಡಿದೆ. ಆದ್ದರಿಂದಲೇ ಅವನ ಪಾತ್ರಗಳೆಲ್ಲ ಎಲ್ಲರ ಮೆಚ್ಚುಗೆಗೆ ಪಾತ್ರರು. ಅಲ್ಲದೆ ಭಾಸನು ಬಳಸುವ ಪಾತ್ರಗಳ ಸಂಖ್ಯೆಯೂ ತೀರ ಕಮ್ಮಿ. ಆವಶ್ಯಕತೆಗಿಂತ ಹೆಚ್ಚಾಗಿ ಒಂದು ಪಾತ್ರವೂ ಅವನ ನಾಟಕಗಳಲ್ಲಿ ಕಾಣಬರುವುದಿಲ್ಲ. ಆ ಪಾತ್ರಗಳ ಮಾತೂ ಹಾಗೆಯೇ ಹಿತಮಿತವಾದುವು. ಭಾಸನ ಪಾತ್ರಚಿತ್ರಣ ವಂತು ಅನ್ಯಾದೃಶ. ಪ್ರಾಯಃ ಪಾತ್ರಚಿತ್ರಣದಕಡೆಯೂ ಗಮನ ಹರಿಸಿರುವ ಮತ್ತು ಆ ಕಾರಣದಿಂದಲೇ ಪಾಶ್ಚಾತ್ಯ ನಾಟಕಕಾರರೊಡನೆ ಹೋಲಿಸಬಹು ದಾದ ಸಂಸ್ಕೃತ ನಾಟಕಕಾರ ಭಾಸನೊಬ್ಬನೇ ಎಂದು ಹೇಳಿದರೆ ತಪ್ಪಾಗದು. ಸಂಸ್ಕೃತ ನಾಟಕಕಾರರ ದೃಷ್ಟಿಯೆಲ್ಲ ಯಾವಾಗಲೂ ರಸಪರಿಪೋಷದಕಡೆಯೇ. ಪಾತ್ರಚಿತ್ರಣ ಅವರಿಗೆ ಅಪ್ರಕೃತ. ಭಾಸನೊಬ್ಬನಲ್ಲಿ ಮಾತ್ರ ಈ ಎರಡನ್ನೂ ನಾವು ಒಟ್ಟಿಗೆ ಕಾಣಬಹುದು.

ಸ್ವಪ್ನವಾಸವದತ್ತದಲ್ಲಿನ ಪಾತ್ರಗಳನ್ನೇ ನೋಡಿ. ಪದ್ಮಾವತಿ, ವಾಸವ ದತ್ತೆಯರ ಚಿತ್ರಣ ಜೋಡಿಯಾಗಿಯೇ ಮೊದಲಿನಿಂದ ಕೊನೆಯವರೆಗೂ ಬಂದು ಇಬ್ಬರ ಸಹಜಗುಣಗಳೂ ಪಕ್ಕಪಕ್ಕದಲ್ಲಿ ಕಣ್ಣಿಗೆ ಕಟ್ಟಿದಂತೆ ನಿಲ್ಲುತ್ತವೆ. ವಯಸ್ಸು, ರೂಪ, ಲೋಕಾನುಭವದಲ್ಲಿನ ಭಿನ್ನತೆಯ ಜತೆಯಲ್ಲೇ ಅವರಿಬ್ಬರ ಉನ್ನತಕುಲಕ್ಕೆ ತಕ್ಕ ಉದಾತ್ತ ನಡೆನುಡಿ, ಔದಾರ್ಯ, ಏನು ಹೇಳಿದರೆ ಯಾರ ಮನಸ್ಸು ನೋಯುತ್ತದೋ ಎಂಬ ಭಾವನೆ, ಎಲ್ಲವೂ ಎದ್ದು ಕಾಣುತ್ತವೆ. ಒಬ್ಬಳು ಇನ್ನೂ ಕನ್ಯೆ, ಆಮೇಲೆ ಹೊಸದಾಗಿ ಮದುವೆಯಾದವಳು. ಇನ್ನೊ ಬ್ಬಳು ಪ್ರೌಢೆ, ಪ್ರೇಮದ ಸವಿ ಕಂಡವಳು. ಇಬ್ಬರೂ ಪತಿಪ್ರಾಣರು, ಸಪತ್ನಿ ಯರು. ಇಬ್ಬರ ವಿಷಯದಲ್ಲೂ ಅವರ ಪತಿಯ ಭಾವನೆ, ವಿದೂಷಕನಂತಹ ಸಾಮಾನ್ಯನ ಭಾವನೆ ಏನು ಎಂಬುದನ್ನೂ ಭಾಸ ಅವರ ಬಾಯಲ್ಲೇ ಆಡಿಸಿ ಅವರ ಚಿತ್ರಣ ಎಲ್ಲ ದೃಷ್ಟಿಯಿಂದಲೂ ಪರಿಪೂರ್ಣ ಎನ್ನುವಂತೆ ಮಾಡಿದ್ದಾನೆ.

ಪ್ರಧಾನ ಪಾತ್ರಗಳ ವಿಷಯದಲ್ಲಿ ಮಾತ್ರ ಭಾಸನದು ವಿಶೇಷ ಗಮನ ವೆನ್ನುವಂತಿಲ್ಲ. ಸಾಮಾನ್ಯ ಚೇಟಿಯೊಬ್ಬಳೂ ಅವನ ದೃಷ್ಟಿಯಲ್ಲಿ ನಾಯಕ ನಾಯಿಕೆಯರಷ್ಟೇ ಮುಖ್ಯ ಪಾತ್ರ. ಅವಳಲ್ಲೂ ಒಂದು ವೈಶಿಷ್ಟ್ಯ ಮೂಡು

ವಂತೆ ಭಾಸ ಅವಳ ನಡೆನುಡಿಯನ್ನು ನಾಟಕದಲ್ಲಿ ನಿರೂಪಿಸುತ್ತಾನೆ. ನಾಟಕ ನೋಡಿಯಾದಮೇಲೆ, ಓದಿಯಾದಮೇಲೆ, ಅದರ ಆದಿಯಲ್ಲಿನ ತಪೋವನದ ಚಿತ್ರ, ಅಲ್ಲಿ ಬರುವ ತಾಪಸಿ, ಕಾಂಚುಕೀಯ, ಬ್ರಹ್ಮಚಾರಿ ಮೊದಲುಗೊಂಡು ಕೊನೆಯಲ್ಲಿ ಬರುವ ಕಾಂಚುಕೀಯ ರೈಭ್ಯ, ಧಾತ್ರಿವಸುಂಧರೆಯವರೆಗೆ ಒಬ್ಬೊಬ್ಬರಲ್ಲೂ ಒಂದೊಂದು ವ್ಯಕ್ತಿತ್ತ್ವ ಎದ್ದು ಕಾಣುತ್ತದೆ ಅವರ ಮಾತೂ, ಅವರು ಎಷ್ಟೇ ಅಪ್ರಧಾನ ಪಾತ್ರವಾಗಿರಲಿ, ಮರೆಯಲಾಗದಂತಹವು. ತಾಪಸಿಯಾಡುವ 'ತಪೋವನ ಅತಿಥಿಗಳಿಗೆ ಸ್ವಗೃಹ' ಎಂಬ ಮಾತನ್ನಾಗಲಿ, ರೈಭ್ಯನಾಡುವ 'ಹಗ್ಗ ಕಿತ್ತುಹೋದಾಗ ಗಡಿಗೆಯನ್ನು ಹಿಡಿದುಕೊಳ್ಳುವವರಾರು?' ಎಂಬ ಮಾತನ್ನಾಗಲಿ, ಮರೆಯಲು ಸಾಧ್ಯವೆ?

ವಿದೂಷಕನ ಅಹಿತಕರವಲ್ಲದ ಮಿತವಾದ ಹಾಸ್ಯವೂ, ಎಂದೂ ಮರೆಯಲಾಗದ ಶಯ್ಯಾಗೃಹ ಸಾರಸಪಂಕ್ತಿ ಶೇಫಾಲಿಕಾಕುಸುಮಸಮೃದ್ಧಿಗಳ ವರ್ಣನೆಗಳೂ, ರಾಜ ಬಿಟ್ಟುಹೋದ ಲಾವಣಕವು ಚಂದ್ರ ನಕ್ಷತ್ರಗಳೊಂದೂ ಇಲ್ಲದ ಆಕಾಶದಂತೆ, ಭಾಗ್ಯಪಂಕ್ತಿ ಚಕ್ರಾರಪಂಕ್ತಿಯಂತೆ, ವಿದೂಷಕನ ಹೊಟ್ಟೆಯ ತೊಳಸು ಕೋಗಿಲೆಯ ಕಣ್ಣೊಳಸಿನಂತೆ ಮುಂತಾದ ಅಸಾಧಾರಣ ಉಪಮಾನಗಳೂ ನಾಟಕದ ಒಂದೊಂದು ಭಾಗವನ್ನೂ ನಮ್ಮ ಮನಃಪಟದಮೇಲೆ ಚಿರಸ್ಥಾಯಿಯಾಗಿರುವಂತೆ ಮಾಡುತ್ತದೆ.

ಪ್ರಕೃತನಾಟಕದ ರಸದ ವಿಷಯದಲ್ಲಿ ಒಂದು ಮಾತು. ಸ್ವಪ್ನವಾಸವದತ್ತದಲ್ಲಿ ಶೃಂಗಾರವೇ ಪ್ರಧಾನರಸವೆಂಬುದು ಸುಸ್ಪಷ್ಟ. ಆದರೆ ಈ ರಸದಲ್ಲೂ ಒಂದು ವೈಶಿಷ್ಟ್ಯವಿದೆ. ಇತರ ನಾಟಕಗಳಲ್ಲಿನ ಶೃಂಗಾರಕ್ಕೂ ಈ ನಾಟಕದ ಶೃಂಗಾರಕ್ಕೂ ಇರುವ ವ್ಯತ್ಯಾಸ ಘಟ್ಟಿಯಾಗಿ ನಗುವುದಕ್ಕೂ ಗಂಭೀರವಾಗಿ ಮುಗುಳ್ನಗೆ ನಗುವುದಕ್ಕೂ ಇರುವಷ್ಟೇ ಎಂದು ಸ್ಥೂಲವಾಗಿ ಹೇಳಬಹುದು. ಇಲ್ಲಿ ನಿರೂಪಿತವಾಗಿರುವ ಪ್ರೇಮ ಪರಿಶುದ್ಧವಾದುದು, ನೈಜವಾದುದು, ಆಂತರಿಕವೂ ಅವ್ಯಾಜಸುಂದರವೂ ಆದುದು. ಗಂಡುಹೆಣ್ಣಿನ ಪ್ರೇಮ ಕಾಮಪ್ರೇರಿತವಾಗಿರುವುದು ಸಹಜವೇ ಆದರೂ, ಅದರ ಛಾಯೆಯನ್ನೂ ಭಾಸ ಇಲ್ಲಿ ಮೂಡಿಸದೆ, ಪದ್ಮಾವತೀ–ವಾಸವದತ್ತೆ–ಉದಯನರ ಸಂವೃತಪ್ರೇಮವನ್ನು ಮಧುಮಧುರವೆಂಬಂತೆ ಚಿತ್ರಿಸಿ ಸಹೃದಯರೆಲ್ಲರ ಪ್ರಶಂಸೆಗೆ ಪಾತ್ರನಾಗಿದ್ದಾನೆ.

Sanskrit works with English Translation, &c.

DRAMA

	Rs.	P.
BHĀSA's Pañcarātram *(Revised Fourth Edition)*	4	50
„ Abhiṣekanāṭakam *(„ 4th Edition–1966)*	4	00
„ Svapna-vāsavadattam *(„ 2nd Edition–1966)*	6	00
„ Pratimā-nāṭakam	4	00
„ Karṇabhāram *(Revised Edition)*	1	25
„ Ūrubhaṅgam of Bhāsa *(1966)*	3	00
KĀLIDĀSA's Mālavikāgnimitram *(Revised Edition)*	4	25
„ Abhijñāna-s'ākuntalam do	5	00
„ Vikramorvas'iyam do	5	00
H[illegible]ṢA's Ratnāvali	3	00
VIS'ĀKHADATTA's Mudrārākṣasam	4	25

CHAMPU

	Rs.	P.
CAMPŪ-RĀMĀYAṆAM—Ayodhyā-kāṇḍa	2	50
do Araṇya-kāṇḍa	2	75
do Kiṣkindhā-kāṇḍa *(1966)*	2	50
NĪLAKAṆṬHA-VIJAYAM Chapter III	2	25

PROSE

	Rs.	P.
BĀṆA's Kādambarī: Pūrvabhāga (Parts I & III) no stock		
do (Part II)	3	00
do (Part IV)	2	50
do (Parts V & VI) each	2	75
do Mahās'vetā-vṛttānta Eng. Trans. only	2	50

POETRY

	Rs.	P.
KĀLIDĀSA's Kumārasambhavam Canto III	2	25
do Canto V	2	50
do Canto VI	2	50
KĀLIDĀSA's Raghuvams'am— Canto IV	1	12
do Canto VI	2	60
do Canto XIII	2	50
do Canto XIV	2	50
AS'VAGHOṢA's Buddhacaritam— Canto I	2	50
do Canto III	2	50
BHARTṚHARI's Nītis'atakam *(Revised Edition 1966)*	2	00

GENERAL

	Rs.	P.
Outlines of the History of Classical Sanskrit Literature *(Revised Edition)*	5	00